# ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

# ಕನಾಟಕ ಕಲಾ
# &
# ವಾಣಿಜ್ಯ ಮಹಾವಿದ್ಯಾಲಯ

# ಪರಿಚಯ ಪುಸ್ತಕ
## (2019-20)



## VISION

*To make our college a Centre of Excellence in Higher Education by imparting Knowledge through which young men and women will learn to be globally competitive, athletic, self- reliant and responsible citizens.*

## MISSION

- *To keep our staff and students abreast with the latest development in the field of knowledge.*
- *To equip our faculty with the latest skills and techniques of teaching to ensure adaptability and compatibility.*
- *To encourage community oriented research and consultancy.*
- *To boost the morale of the society through value - based education.*
- *To ensure nobility and prosperity of the nation through curricular and extra - curricular activities.*
- *To achieve excellence through dedication, commitment and accountability.*
- *To provide the best institutional framework and modernise the infrastructural facilities.*

## OBJECTIVES

- *To provide quality education at a minimum cost so as to ensure social justice.*
- *To impart value- based education.*
- *To conduct academic programmes relevant to the socio-economic needs of the nation.*
- *To impart professional skills through innovative training programmes.*
- *To provide adequate encouragement to undertake reserch.*
- *To encourage teachers to participate in faculty development programmes.*
- *To establish linkage with other institutions and research organisations to promote teaching and research.*
- *To establish brail library for the benefit of blind students.*
- *To further strengthen the college Gymkhana with modern equipments to promote sports and cultural activities.*
- *To conduct Enterpreneurship Development Programmes to encourage self - employment among the students.*

# ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ

**ಪ್ರಸ್ತಾವನೆ :**

ದೇಶದ ಅತ್ಯುತ್ತಮ ವಿಶ್ವವಿದ್ಯಾಲಯಗಳಲ್ಲೊಂದಾದ, ಸುವರ್ಣಮಹೋತ್ಸವ ಆಚರಿಸಿಕೊಂಡ, ನ್ಯಾಕ್‌ನಿಂದ ಶೈಕ್ಷಣಿಕ ಗುಣಮಟ್ಟದ ಮೌಲ್ಯಮಾಪನದಲ್ಲಿ 'ಎ' ಗ್ರೇಡ್ ಪಡೆದು, ಯು.ಜಿ.ಸಿ. ಯಿಂದ "ಪೋಟೆನ್ಶಿಯಲ್ ಫಾರ್ ಎಕ್ಸಲೆನ್ಸ್" ಎಂಬ ಹೆಗ್ಗಳಿಕೆಗೆ ಪಾತ್ರವಾದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಕಾಲೇಜು ಮಾತೃಸಂಸ್ಥೆ. ಉತ್ತರ ಕರ್ನಾಟಕದ ಈ ಪ್ರತಿಷ್ಠಿತ ವಿದ್ಯಾಸಂಸ್ಥೆ ಈ ವರ್ಷ ಶತಮಾನೋತ್ಸವನ್ನು ಆಚರಿಸಿಕೊಳ್ಳುತ್ತಲಿದೆ. ಸರಿಸುಮಾರು ನೂರು ವರ್ಷಗಳ ಹಿಂದೆ, ಈ ಭಾಗದ ಜನ ಉನ್ನತ ವ್ಯಾಸಂಗಕ್ಕಾಗಿ ದೂರದ ಮೈಸೂರು ಅಥವಾ ಮುಂಬೈಗೆ ಹೋಗಬೇಕಾಗುತ್ತಿತ್ತು. ಇಂತಹ ಪರಿಸ್ಥಿಯನ್ನು ಅರಿತ ಖ್ಯಾತ ಶಿಕ್ಷಣತಜ್ಞರಾಗಿದ್ದ ಹಾಗೂ ಸಾಮಾಜಿಕ ಕಳಕಳಿಯುಳ್ಳ ದಿವಾನ್ ಬಹದ್ದೂರ ರೊದ್ದ ಶ್ರೀನಿವಾಸರಾಯರು ಹಾಗೂ ರಾವ್ ಬಹದ್ದೂರ ಅರಟಾಳ ರುದ್ರಗೌಡರು ಬ್ರಿಟಿಷರ ಶರತ್ತಿನ ಪ್ರಕಾರ ಈ ಭಾಗದ ಜನರಿಂದ ಎರಡು ಲಕ್ಷ ರೂಪಾಯಿ ವಂತಿಗೆ ಸಂಗ್ರಹಿಸಿ ಬ್ರಿಟಿಷರಿಗೆ ಒಪ್ಪಿಸಿ ಸನ್ ೧೯೧೭ ರಲ್ಲಿ ಕರ್ನಾಟಕ ಕಾಲೇಜು ಸ್ಥಾಪಿಸಿ ಈ ಭಾಗದ ಬೌದ್ಧಿಕ ಹಾಗೂ ಶೈಕ್ಷಣಿಕ ಪ್ರಗತಿಗೆ ಕಾರಣರಾದರು. ಇಂತಹ ಜ್ಞಾನದೇಗುಲದಲ್ಲಿ ಅಧ್ಯಯನ ಮಾಡಿದ ಅನೇಕ ವಿದ್ಯಾರ್ಥಿಗಳು ತಮ್ಮ ವಿದ್ವತ್‌ಪೂರ್ಣ ಸಾಧನೆಯಿಂದ ಈ ಕಾಲೇಜಿನ ಕೀರ್ತಿ ಪತಾಕೆಯನ್ನು ದೇಶ-ವಿದೇಶಗಳಲ್ಲಿ ಹಾರಿಸಿ ಅಜರಾಮರವಾಗಿದ್ದಾರೆ. ಅವರಲ್ಲಿ ಖ್ಯಾತ ಶಿಕ್ಷಣತಜ್ಞ ಡಾ. ಡಿ.ಸಿ. ಪಾವಟೆ, ಜ್ಞಾನಪೀಠ ಪುರಸ್ಕೃತರಾದ ಡಾ. ವಿ.ಕೃ. ಗೋಕಾಕ, ಡಾ. ಗಿರೀಶ ಕಾರ್ನಾಡ, ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಕವಿಗಳಾದ ಚೆನ್ನವೀರ ಕಣವಿ, ವಿಮರ್ಶಕ ಪ್ರೊ. ಗಿರಡ್ಡಿ ಗೋವಿಂದರಾಜ, ಭಾಷಾವಿಜ್ಞಾನಿ ಡಾ. ಆರ್.ಸಿ. ಹಿರೇಮಠ, ವೈದ್ಯ ಡಾ.ಎಸ್.ಜಿ.ನಾಗಲೋಟಿಮಠ, ಖ್ಯಾತ ನೇತ್ರತಜ್ಞ ಡಾ. ಎಂ.ಎಂ. ಜೋಶಿ, ಇನ್‌ಫೋಸಿಸ್‌ನ ಹಿಂದಿನ ಮುಖ್ಯ ಆಡಳಿತಾಧಿಕಾರಿ ನಂದನ ನಿಲೇಕಣಿ ಹಾಗೂ ರಾಷ್ಟ್ರ ಖ್ಯಾತಿಯ ಕ್ರೀಡಾಪಟು ತ್ರಿಕನ್ನಡರವರಂತಹ ಅನೇಕ ಗಣ್ಯರು ಇಲ್ಲಿ ಅಧ್ಯಯನ ಮಾಡಿದವರೆಂದು ಈ ಕಾಲೇಜಿಗೆ ತುಂಬು ಅಭಿಮಾನವಿದೆ.

ಈ ರೀತಿ ಅದ್ಭುತ ಚರಿತ್ರೆ ಹೊಂದಿದ ಕರ್ನಾಟಕ ಕಾಲೇಜು ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿಗೆ ಬೇಕಾಗುವ ಎಲ್ಲ ಸೌಕರ್ಯಗಳನ್ನು ಹೊಂದಿದೆ. ನೂರಕ್ಕೆ ನೂರರಷ್ಟು ಪಾರದರ್ಶಕತೆಯ ಪ್ರವೇಶಾತಿ, ತರಗತಿಗಳಿಗೆ ಸಿ.ಸಿ. ಟಿವ್ಹಿ ಕ್ಯಾಮರಾ, ಎಲ್.ಸಿ.ಡಿ ಹಾಗೂ ಪಿ.ಪಿ.ಟಿ ಬೋಧನೆಗಳಂಥ ಅತ್ಯಾಧುನಿಕ ಸೌಕರ್ಯಗಳನ್ನು ಹೊಂದಿದೆ. ಎಲ್ಲ ವಿಭಾಗಗಳ ಮುಖ್ಯಸ್ಥರಿಗೆ ಗಣಕಯಂತ್ರ ಮತ್ತು ಅಂತರ್ಜಾಲ ಸೌಲಭ್ಯ ಒದಗಿಸುವ ಮೂಲಕ ಜ್ಞಾನ ವಿಸ್ತರಣೆಗೆ ಪ್ರೋತ್ಸಾಹಿಸಲಾಗುತ್ತಿದೆ. ಕಛೇರಿಯನ್ನು ಆಧುನೀಕರಣಗೊಳಿಸಿ ಎಲ್ಲ ವಿಭಾಗದ ಸಹಾಯಕರಿಗೂ ಗಣಕಯಂತ್ರಗಳನ್ನು ಒದಗಿಸಲಾಗಿದೆ. ಒಟ್ಟು 5 ಲಕ್ಷ ರೂಪಾಯಿ ಬೆಲೆಬಾಳುವ ಆತ್ಯಾಧುನಿಕ ಉಪಕರಣಗಳಿಂದೊಡಗೂಡಿದ ಸುಸಜ್ಜಿತ ಜಿಮ್ ಕೇಂದ್ರವನ್ನು ವಿದ್ಯಾರ್ಥಿಧಾಮದಲ್ಲಿ ಪ್ರಾರಂಭಿಸಲಾಗಿದೆ. ಮನೋವಿಜ್ಞಾನ ವಿಭಾಗದಲ್ಲಿನ ಪ್ರಯೋಗಾಲಯವನ್ನು ಆಧುನೀಕರಣಗೊಳಿಸಲಾಗಿದೆ. ಎರಡನೇ ಹಂತದ ಕಾವೇರಿ ವಿದ್ಯಾರ್ಥಿನಿಲಯ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿನಿಯರಿಗೆ ಸ್ಥಳಾವಕಾಶ ಕಲ್ಪಿಸಿದ್ದು ಪರಸ್ಥಳದಿಂದ ಬರುವ ಶಿಕ್ಷಣಾರ್ಥಿಗಳಿಗೆ ವಸತಿ-ಸೌಲಭ್ಯ ಕಲ್ಪಿಸಿದೆ. ಯು.ಜಿ.ಸಿ. ಅನುದಾನದ ಸಹಾಯದಿಂದ ಯು.ಪಿ.ಎಸ್, ಜನರೇಟರ್ ಹಾಗೂ ಶುದ್ಧೀಕರಿಸಿ ಶೀತಲೀಕರಣಗೊಳಿಸುವ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ. ಇಂದಿನ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವಲ್ಲಿ ಕಾಲೇಜು ದಾಪುಗಾಲಿನಲ್ಲಿ ಮುನ್ನಡೆಯುತ್ತಿದೆ. ಈಗ ವೈ-ಫೈ ವ್ಯವಸ್ಥೆಯನ್ನು ಕಲ್ಪಿಸುವ ದಿಶೆಯಲ್ಲಿ ಕಾಲೇಜು ಕಾರ್ಯ ನಿರತವಾಗಿದೆ.

ಇಂತಹ ಪ್ರತಿಷ್ಠಿತ ವಿದ್ಯಾಸಂಸ್ಥೆಯಲ್ಲಿ 2019-2020 ಶೈಕ್ಷಣಿಕ ವರ್ಷದ ವಿವಿಧ ತರಗತಿಗಳಿಗೆ ಪ್ರವೇಶ ಬಯಸುವ ಎಲ್ಲ ವಿದ್ಯಾರ್ಥಿಗಳಿಗೆ ಕಾಲೇಜು ಹಾರ್ದಿಕ ಸ್ವಾಗತ ಬಯಸುತ್ತದೆ. ಈ ಕಾಲೇಜಿನ ಕೀರ್ತಿಯನ್ನು ಇನ್ನಷ್ಟು ಎತ್ತರಕ್ಕೆ ಒಯ್ಯಲು ವಿದ್ಯಾರ್ಥಿಗಳ ಸಹಕಾರ ಅತ್ಯವಶ್ಯ. ಆದ್ದರಿಂದ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಈ ಪರಿಚಯ ಪುಸ್ತಕವನ್ನು ವಿವರವಾಗಿ ಅಭ್ಯಸಿಸಿ, ಇದರಲ್ಲಿ ನಮೂದಿಸಿದ ನಿಯಮಗಳನ್ನು ಅರಿತುಕೊಂಡು, ಅವುಗಳಿಗೆ ಬದ್ಧರಾಗಿ ನಡೆಯಬೇಕು. ಇಲ್ಲಿ ಲಭ್ಯವಿರುವ ಸಮಸ್ತ ಸೌಲಭ್ಯಗಳ ಲಾಭ ಪಡೆದುಕೊಂಡು ತಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಇಲ್ಲಿರುವ ತಜ್ಞ ಶಿಕ್ಷಕರ ಮಾರ್ಗದರ್ಶನ ಪಡೆದುಕೊಂಡು ನಿಷ್ಠೆಯಿಂದ ವಿದ್ಯಾರ್ಜನೆ ಮಾಡಿ ಇಲ್ಲಿಯ ಸುಸಂಸ್ಕೃತ ಪರಿಸರವನ್ನು ಇನ್ನಷ್ಟು ಸುಮಧುರಗೊಳಿಸಬೇಕು. ಅಲ್ಲದೆ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಈ ಕಾಲೇಜು ಪ್ರತಿಪಾದಿಸುತ್ತ ಬಂದಿರುವ ಮೌಲ್ಯಗಳನ್ನು ಅಳವಡಿಸಿಕೊಂಡು ಕಾಲೇಜಿಗೆ ಒಳ್ಳೆಯ ಹೆಸರು ತರಬೇಕು. 2018-19 ರಲ್ಲಿ ಈ ಮಹಾವಿದ್ಯಾಲಯದಲ್ಲಿ ಓದಿದ ಐದು ವಿದ್ಯಾರ್ಥಿಗಳು ಚಿನ್ನದ ಪದಕ ಗಳಿಸಿದ್ದಾರೆ. ಪದವಿ ವರ್ಗಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಕೊಡಲಾಗುವ ವಿವಿಧ ಶಿಷ್ಯವೇತನ ಮತ್ತು ನಗದು ಬಹುಮಾನಗಳನ್ನು ಪಡೆದುಕೊಂಡಿದ್ದಾರೆ.

ವಿವಿಧ ಭಾಷಾ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳು ತಮ್ಮ ಆಸಕ್ತಿ, ಅಭಿರುಚಿಗೆ ಮತ್ತು ಮಾತೃಭಾಷೆಗೆ ಅನುಗುಣವಾಗಿ, ಇಲ್ಲಿ ಬೋಧಿಸಲ್ಪಡುತ್ತಿರುವ ಹತ್ತು ಭಾಷೆಗಳಲ್ಲಿ ತಮಗೆ ಬೇಕಾದವುಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬಹುದಾಗಿದೆ. ಈಗಿನ ದಿನಮಾನಗಳಲ್ಲಿ ಸೃಷ್ಟಿಸಲ್ಪಡುತ್ತಿರುವ ಅವಕಾಶಗಳು ವಿದ್ಯಾರ್ಥಿಗಳಿಗೆ ತಲುಪುವಂತಾಗಲೆಂದು ಫಂಕ್ಷನಲ್ ಹಿಂದೀ – ಇಂಗ್ಲೀಷ – ಕನ್ನಡ ವಿಷಯಗಳನ್ನು ಈ ಕಾಲೇಜಿನಲ್ಲಿ ಕಲಿಸಲಾಗುತ್ತದೆ. ಒಟ್ಟು 33 ವಿವಿಧ ವಿಷಯಗಳಲ್ಲಿ ವಿದ್ಯಾರ್ಥಿಗಳು ತಮಗೆ ಬೇಕಾಗಿರುವ ಮೂರು ವಿಷಯಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬಹುದಾಗಿದೆ. ಹಲವಾರು ಭಾಷೆ ಮತ್ತು ವಿಷಯಗಳಲ್ಲಿ ತಮಗೆ ಬೇಕಾದವುಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡುವುದಕ್ಕೆ ಇಲ್ಲಿರುವಷ್ಟು ಅವಕಾಶಗಳು ಬೇರೆ ಯಾವುದೇ ಕಾಲೇಜಿನಲ್ಲಿ ಇರುವುದಿಲ್ಲ. ಇಲ್ಲಿ ಕಲಿಸಲಾಗುವ ಅಧ್ಯಯನ ವಿಷಯಗಳು ಈ ಕೆಳಗಿನಂತಿವೆ.

**ಅಧ್ಯಯನ ವಿಷಯಗಳು**

1. ಕನ್ನಡ
2. ಫಂಕ್ಷನಲ್(ಕ್ರಿಯಾತ್ಮಕ) ಕನ್ನಡ
3. ಇಂಗ್ಲೀಷ
4. ಫಂಕ್ಷನಲ್(ಕ್ರಿಯಾತ್ಮಕ) ಇಂಗ್ಲೀಷ
5. ಹಿಂದೀ
6. ಫಂಕ್ಷನಲ್(ಕ್ರಿಯಾತ್ಮಕ) ಹಿಂದೀ
7. ಸಂಸ್ಕೃತ ಮತ್ತು ಪ್ರಾಕೃತ
8. ಮರಾಠಿ
9. ಉರ್ದು ಮತ್ತು ಪರ್ಶಿಯನ್
10. ಫ್ರೆಂಚ್
11. ಭಾಷಾ ವಿಜ್ಞಾನ
12. ಜನಪದ ಸಾಹಿತ್ಯ
13. ಇತಿಹಾಸ
14. ತತ್ವಶಾಸ್ತ್ರ
15. ಸಂಖ್ಯಾಶಾಸ್ತ್ರ
16. ಗಣಿತ
17. ಮನೋವಿಜ್ಞಾನ
18. ಭೂಗೋಳಶಾಸ್ತ್ರ
20. ಅಪರಾಧಶಾಸ್ತ್ರ
21. ಸಂಗೀತ
22. ಯೋಗ
23. ತರ್ಕಶಾಸ್ತ್ರ
24. ಧರ್ಮಶಾಸ್ತ್ರ
25. ವಾಣಿಜ್ಯಶಾಸ್ತ್ರ
26. ಸಾರ್ವಜನಿಕ ಆಡಳಿತ
27. ಸಮಾಜಶಾಸ್ತ್ರ
28. ಮಾನವಶಾಸ್ತ್ರ
29. ಅರ್ಥಶಾಸ್ತ್ರ
30. ಕಂಪ್ಯೂಟರ್ ಅಪ್ಲಿಕೇಶನ್ಸ್
31. ರಾಜ್ಯಶಾಸ್ತ್ರ
32. ಸಮೂಹ ಸಂವಹನ & ಪತ್ರಿಕೋದ್ಯಮ

2007–2008ನೇ ಶೈಕ್ಷಣಿಕ ವರ್ಷದಿಂದ ಐದು ವರ್ಷ ಅವಧಿಯ ಸಮಗ್ರ ಪ್ರವಾಸೋದ್ಯಮ ಆಡಳಿತದಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್ (MTTM - Master Degree in Tourism and Travel Management)ನ್ನು ಪ್ರಾರಂಭಿಸಲಾಗಿದೆ. ಪಿ.ಯು.ಸಿ. / ತತ್ಸಮಾನ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳು ಈ ಕೋರ್ಸ್‌ಗೆ ಪ್ರವೇಶ ಪಡೆಯಬಹುದಾಗಿದೆ. BTA (Bachelor of Tourism Administration) ಕೋರ್ಸಗಳಿಗೂ ಇಲ್ಲಿ ಪ್ರವೇಶಾತಿ ಲಭ್ಯವಿದೆ. ಹೆಚ್ಚಿನ ವಿವರಗಳಿಗೆ MTTM ವಿಭಾಗದ ಪರಿಚಯ ಪುಸ್ತಕ ನೋಡಬಹುದು. ಒಂದು ವರ್ಷದ Diploma in Hotel and Hospitality Services ಪ್ರಾರಂಭಿಸಲಾಗಿದೆ.

2011–12ನೇ ಸಾಲಿನಿಂದ ಸ್ನಾತಕ ಪದವಿಗೆ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮವೆಂಬ ಐಚ್ಛಿಕ ವಿಷಯವನ್ನು ಅಳವಡಿಸಲಾಗಿದೆ. ಈ ವಿಷಯ ತೆಗೆದುಕೊಳ್ಳುವ ವಿದ್ಯಾರ್ಥಿಗಳು ಪತ್ರಿಕೋದ್ಯಮದಲ್ಲಿ ತಮ್ಮ ಭವಿಷ್ಯ ರೂಪಿಸಿಕೊಳ್ಳಬಹುದು. ಅಲ್ಲದೇ 'ಸಮಾಜಕಾರ್ಯ' (BSW) ಎಂಬ ಹೊಸ ಕೋರ್ಸ್ ಕೂಡ ಬಹುದಿನಗಳ ಹಿಂದೆಯೇ ಪ್ರಾರಂಭವಾಗಿದೆ. ಕಾಲೇಜಿನ ಕ್ಯಾಂಪಸ್‌ನಲ್ಲಿಯೇ ಕೆಲವು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಪದವಿಯನ್ನು ನಮ್ಮ ಕಾಲೇಜಿನಲ್ಲಿ ಓದಿದ ವಿದ್ಯಾರ್ಥಿಗಳು ಇಲ್ಲಯೇ 'ಎಂ.ಕಾಂ' (ಸಿ.ಎಸ್), ಹಾಗೂ ಎಂ.ಕಾಂ ಎಂ.ಎ. ಅರ್ಥಶಾಸ್ತ್ರ ಹಾಗೂ ಎಂ.ಎ. ಇಂಗ್ಲೀಷ್ ವಿಷಯಗಳಲ್ಲಿ ತಮ್ಮ ಅಧ್ಯಯನ ಮುಂದುವರೆಸಬಹುದು.

ಈ ಎಲ್ಲ ವರ್ಗಗಳಲ್ಲಿ ಓದುವ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಅನೇಕ ಶಿಷ್ಯವೇತನಗಳು, ನಗದು ಬಹುಮಾನ ಹಾಗೂ ಪರಿಶಿಷ್ಟ ಜಾತಿ, ಪಂಗಡಗಳ ವಿದ್ಯಾರ್ಥಿಗಳಿಗಿರುವ ಎಲ್ಲ ಸೌಲಭ್ಯಗಳು ಇಲ್ಲಿವೆ.

18. ಶ್ರೀಮತಿ ವಿದ್ಯಾ ಸಪ್ರೆ (ಚೌಧರಿ) ಶಿಷ್ಯವೇತನ (ಸಂಸ್ಕೃತ)

## ಪದವಿ ವರ್ಗಗಳಲ್ಲಿ ಅತ್ಯಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಇರುವ ಶಿಷ್ಯವೇತನಗಳು

01. ಪರಿಶಿಷ್ಟ ಜಾತಿ ಪಂಗಡಗಳ ಶಿಷ್ಯವೇತನ
02. ಕೆ–1, 2–ಎ, 2–ಬಿ, 3–ಎ, 3–ಬಿ ಶಿಷ್ಯವೇತನ
03. ಕಾಲೇಜ್ ಓಪನ್‌ಮೆರಿಟ್(ಅರ್ಹತಾ)ಶಿಷ್ಯವೇತನ
04. ಮಾಜಿ ಸೈನಿಕರ ಮಕ್ಕಳ ಶಿಷ್ಯವೇತನ
05. ಅಂಗವಿಕಲರ ಶಿಷ್ಯವೇತನ
06. ಸಂಸ್ಕೃತ ಶಿಷ್ಯವೇತನ
07. ರೂರಲ್ ಮೆರಿಟ್ ಸ್ಕಾಲರ್‌ಶಿಪ್
08. ನ್ಯಾಶನಲ್ ಮೆರಿಟ್ ಸ್ಕಾಲರ್‌ಶಿಪ್
09. ಉರ್ದು ಶಿಷ್ಯವೇತನ
10. ಸಂಕಷ್ಟ ಪರಿಸ್ಥಿತಿಯಲ್ಲಿರುವವರ ಮಕ್ಕಳಿಗೆ ಶಿಷ್ಯವೇತನ
11. ಮಾಜಿಸೈನಿಕರ ಮಕ್ಕಳ ಪುಸ್ತಕಾನುದಾನ ಶಿಷ್ಯವೇತನ
12. ದಕ್ಷಿಣ ಫೆಲೋಶಿಫ್ ಬಿ.ಎ/ಬಿ.ಕಾಂ
13. ರಾಷ್ಟ್ರೀಯ ಸಂಸ್ಕೃತ ಶಿಷ್ಯವೇತನ
14. ಗೋದಾವರಿ ಸಕ್ಕರೆಕಾರ್ಖಾನೆ ಪ್ರತಿಭಾ ಶಿಷ್ಯವೇತನ
15. ಶ್ರೀಮತಿ ವಿಮಲಾ ಕುಲಕರ್ಣಿ ಪುರಸ್ಕಾರ (ಕನ್ನಡ)
ಶ್ರೀಮತಿ ಸುಧಾಮೂರ್ತಿ ಇನ್ಫೋಸಿಸ್ ಪ್ರತಿಷ್ಠಾನ ಪುರಸ್ಕಾರ (ಗಣಿತ)
17. ಶ್ರೀಮತಿ ಎಸ್.ಬಿ. ಶಿಂತ್ರಿ ಗಂಗಾಲೋಕ ಪ್ರಶಸ್ತಿ (ಇಂಗ್ಲೀಷ)
18. ಶ್ರೀಮತಿ ವಿದ್ಯಾ ಸಪ್ರೆ (ಚೌಧರಿ) ಶಿಷ್ಯವೇತನ (ಸಂಸ್ಕೃತ)
19. ಬೀಡಿ ಕಾರ್ಮಿಕರ ಮಕ್ಕಳ ಶಿಷ್ಯವೇತನ
20. ಜಿಂದಾಲ್ ಮೆಡಿಕಲ್ ರಿಲೀಫ್ ಸೊಸೈಟಿ ಶಿಷ್ಯವೇತನ
21. ಪ್ರೊ. ಸಿ.ಎಸ್. ಕಡ್ಡಿಪುಡಿ ನಗದು ಬಹುಮಾನ
22. ದಿ. ಶ್ರೀ ಮಲ್ಲೇಶಪ್ಪ ಎ. ಜಾಲಿಹಾಳ ಮತ್ತು ದಿ.ಶ್ರೀಮತಿ ಕಲ್ಲವ್ವ ಜಾಲಿಹಾಳ ನಗದು ಬಹುಮಾನ(ಇಂಗ್ಲೀಷ್)
23. ಪ್ರೊ. ಸ.ಸ, ಮಾಳವಾಡ (ಪಿ.ಯು ಕನ್ನಡ ಅರ್ಹತಾ ಶಿಷ್ಯವೇತನ)
24. ಸೇವಾ ಸಿಬ್ಬಂದಿ ಶಿಷ್ಯವೇತನ
25. ರಾಚಯ್ಯಸ್ವಾಮಿ ವಸ್ತ್ರದ ಇವರ ಸ್ಮರಣಾರ್ಥ ಸುವರ್ಣಪದಕ

## ಪ್ರವೇಶ ವಿವರ

ಮಹಾವಿದ್ಯಾಲಯದಲ್ಲಿ ಕಲಾ, ವಾಣಿಜ್ಯ ಮತ್ತು ವ್ಯವಹಾರ ಆಡಳಿತ ತರಗತಿಗಳಿಗೆ ಪ್ರತಿಭೆ ಮತ್ತು ಮೀಸಲಾತಿ ನಿಯಮಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದೆ. ಪ್ರವೇಶಾವಕಾಶ ವಿವರಗಳು ಈ ಕೆಳಗಿನಂತಿವೆ.

| ಕ್ರ. ಸಂ. ವಿಭಾಗ | ತರಗತಿ | ಪ್ರವೇಶಾವಕಾಶ |
|---|---|---|
| **01. ಕಲಾ** | **ಪಿಯುಸಿ ಪ್ರಥಮ** | **240** |
| | **ಪಿಯುಸಿ ದ್ವಿತೀಯ** | **240** |
| | ಬಿ.ಎ. ಮೊದಲನೆಯ ಸೆಮಿಸ್ಟರ್ | 360 |
| | ಬಿ.ಎ. ಮೂರನೆಯ ಸೆಮಿಸ್ಟರ್ | 360 |
| | ಬಿ.ಎ. ಐದನೆಯ ಸೆಮಿಸ್ಟರ್ | 360 |
| **02. ಬಿ.ಎಸ್.ಡಬ್ಲು** | ಮೊದಲನೆಯ ಸೆಮಿಸ್ಟರ್ | 20 |
| | ಮೂರನೆಯ ಸೆಮಿಸ್ಟರ್ | 20 |
| | ಐದನೆಯ ಸೆಮಿಸ್ಟರ್ | 20 |
| **03. ವಾಣಿಜ್ಯ** | **ಪಿಯುಸಿ ಪ್ರಥಮ** | **80** |
| | **ಪಿಯುಸಿ ದ್ವಿತೀಯ** | **80** |
| | ಬಿ.ಕಾಂ. ಮೊದಲನೆಯ ಸೆಮಿಸ್ಟರ್ | 120 |
| | ಬಿ.ಕಾಂ. ಮೂರನೆಯ ಸೆಮಿಸ್ಟರ್ | 120 |
| | ಬಿ.ಕಾಂ. ಐದನೆಯ ಸೆಮಿಸ್ಟರ್ | 120 |
| **04. ಬಿ.ಬಿ.ಎ.** | ಮೊದಲನೆಯ ಸೆಮಿಸ್ಟರ್ | 40 |
| **05. ಬಿ.ಕಾಂ. (ಸಿ.ಎಸ್.)** | ಮೊದಲನೆಯ ಸೆಮಿಸ್ಟರ್ | 40 |
| **06. ಬಿಟಿಎ** | | 40 |
| **07. ಡಿಪ್ಲೋಮಾ ಇನ್ ಹಾಸ್ಪಿಟಾಲಿಟಿ ಸರ್ವಿಸಿಸ್** | | |
| **08. ಎಂ.ಟಿ.ಟಿ. ಎಮ್** | ಮೊದಲನೆಯ ಸೆಮಿಸ್ಟರ್ | 40 |
| **09 ಎಂ. ಕಾಂ. (ಸಿ.ಎಸ್.)** | ಮೊದಲನೆಯ ಸೆಮಿಸ್ಟರ್(ಸೆಲ್ಫ್ ಫೈನಾನ್ಸಡ್) | 40 |
| **10. ಎಂ.ಎ. ಇಂಗ್ಲೀಷ್** | ಮೊದಲನೆಯ ಸೆಮಿಸ್ಟರ್(ಸೆಲ್ಫ್ ಫೈನಾನ್ಸಡ್) | 40 |
| **11. ಎಂ.ಎ. ಅರ್ಥಶಾಸ್ತ್ರ** | ಮೊದಲನೆಯ ಸೆಮಿಸ್ಟರ್ | 40 |
| **12. ಎಂ ಕಾಂ** | ಮೊದಲನೆಯ ಸೆಮಿಸ್ಟರ್ | 40 |

ಬಿ.ಬಿ.ಎ, ಬಿ.ಕಾಂ(ಸಿ ಎಸ್),ಬಿ.ಟಿ.ಎ ಎಂ.ಟಿ.ಟಿ.ಎಮ್ ಕೋರ್ಸುಗಳಿಗೆ ಸಂಬಂಧಿಸಿದ ಪರಿಚಯ ಪುಸ್ತಕಗಳನ್ನು ಆಯಾ ವಿಭಾಗಗಳಿಂದ ಪ್ರತ್ಯೇಕವಾಗಿ ತೆಗೆದುಕೊಳ್ಳಬೇಕು

**ಪಿ.ಯು.ಸಿ. ಪ್ರಥಮ ವರ್ಷ**

1. **ಇಂಗ್ಲೀಷ ಬೇಸಿಕ್ ಕಡ್ಡಾಯವಾಗಿದೆ.**
2. ಕೆಳಕಾಣಿಸಿದ ಯಾವುದಾದರೊಂದು ಭಾಷೆಯನ್ನು ಆಯ್ದುಕೊಳ್ಳಬೇಕು.
   ಕನ್ನಡ, ಹಿಂದೀ, ಸಂಸ್ಕೃತ, ಮರಾಠಿ, ಉರ್ದು, ಫ್ರೆಂಚ್
3. ಈ ಕೆಳಗಿನ ಗುಂಪುಗಳಲ್ಲಿ ಯಾವುದಾದರೊಂದು ಗುಂಪನ್ನು ಆಯ್ದುಕೊಳ್ಳಬೇಕು.

| | | | | |
|---|---|---|---|---|
| ಗುಂಪು–1 | ಇತಿಹಾಸ | ಅರ್ಥಶಾಸ್ತ್ರ | ಸಮಾಜಶಾಸ್ತ್ರ | ರಾಜ್ಯಶಾಸ್ತ್ರ |
| ಗುಂಪು–2 | ಇತಿಹಾಸ | ಅರ್ಥಶಾಸ್ತ್ರ | ತರ್ಕಶಾಸ್ತ್ರ | ಸಮಾಜಶಾಸ್ತ್ರ |
| ಗುಂಪು–3 | ಇತಿಹಾಸ | ಅರ್ಥಶಾಸ್ತ್ರ | ಸಮಾಜಶಾಸ್ತ್ರ | ಐಚ್ಛಿಕ ಕನ್ನಡ |
| ಗುಂಪು–4 | ಅರ್ಥಶಾಸ್ತ್ರ | ಸಮಾಜಶಾಸ್ತ್ರ | ರಾಜ್ಯಶಾಸ್ತ್ರ | ಮನೋವಿಜ್ಞಾನ |
| ಗುಂಪು–5 | ಅರ್ಥಶಾಸ್ತ್ರ | ತರ್ಕಶಾಸ್ತ್ರ | ಸಮಾಜಶಾಸ್ತ್ರ | ಮನೋವಿಜ್ಞಾನ |
| ಗುಂಪು–6 | ಇತಿಹಾಸ | ಅರ್ಥಶಾಸ್ತ್ರ | ಭೂಗೋಳಶಾಸ್ತ್ರ | ಐಚ್ಛಿಕ ಕನ್ನಡ |
| ಗುಂಪು–7 | ಇತಿಹಾಸ | ಅರ್ಥಶಾಸ್ತ್ರ | ಭೂಗೋಳಶಾಸ್ತ್ರ | ರಾಜ್ಯಶಾಸ್ತ್ರ |
| ಗುಂಪು–8 | ಇತಿಹಾಸ | ಅರ್ಥಶಾಸ್ತ್ರ | ಐಚ್ಛಿಕ ಕನ್ನಡ | ಹಿಂದುಸ್ತಾನೀ ಸಂಗೀತ |

**ಪಿ.ಯು.ಸಿ. ದ್ವಿತೀಯ ವರ್ಷ**

ಪಿಯುಸಿ ಕಲಾ ಪ್ರಥಮ ವರ್ಷದಲ್ಲಿ ಅಭ್ಯಸಿಸಿದ ವಿಷಯಗಳನ್ನೇ ದ್ವಿತೀಯ ವರ್ಷದಲ್ಲಿಯೂ ಅಭ್ಯಸಿಸಬೇಕು.

ಪಿಯು ದ್ವಿತೀಯ ಪರೀಕ್ಷೆಯಲ್ಲಿ ಕನ್ನಡ (ಬೇಸಿಕ್)ದಲ್ಲಿ ಅತ್ಯಧಿಕ ಅಂಕಗಳಿಸಿದ ಕಲಾ ಹಾಗೂ ವಿಜ್ಞಾನದಲ್ಲಿನ ವಿದ್ಯಾರ್ಥಿಗಳಿಗೆ ಸ.ಸ. ಮಾಳವಾಡ ನಗದು ಬಹುಮಾನ ಕೊಡಲಾಗುತ್ತದೆ.

**ಬಿ.ಎ. 1 ರಿಂದ 4ನೆಯ ಸೆಮಿಸ್ಟರ್‌ವರೆಗೆ ವಿದ್ಯಾರ್ಥಿಗಳು ಅಭ್ಯಸಿಸಬಹುದಾದ ವಿಷಯಗಳು**

ಎ. **ಗುಂಪು ಒಂದು : ಬಿ.ಎ. 1 ರಿಂದ 4ನೇ ಸೆಮಿಸ್ಟರ್‌ವರೆಗೆ ವಿದ್ಯಾರ್ಥಿಗಳಿಗೆ ಲಭ್ಯವಿರುವ ಭಾಷಾ ವಿಷಯಗಳು.**
**ಬಿ.ಎ. 1 ರಿಂದ 4ನೇ ಸಮಿಸ್ಟರ್‌ವರೆಗೆ ಇಂಗ್ಲೀಷ ವಿಷಯವು ಕಡ್ಡಾಯಾಗಿರುತ್ತದೆ.** ಇದಲ್ಲದೆ ಎರಡನೆ ಭಾಷಾ ವಿಷಯವೆಂದು ಈ ಕೆಳಗೆ ಕಾಣಿಸಿದವುಗಳಲ್ಲಿ ಯಾವುದಾದರು ಒಂದನ್ನು ವಿದ್ಯಾರ್ಥಿಗಳು ಆಯ್ದುಕೊಳ್ಳಬೇಕು.
ಕನ್ನಡ, ಸಂಸ್ಕೃತ, ಪ್ರಾಕೃತ, ಮರಾಠಿ, ಹಿಂದೀ, ಉರ್ದು, ಪರ್ಶಿಯನ್, ಫ್ರೆಂಚ್, ಅಥವಾ ಎಡಿಶನಲ್ ಇಂಗ್ಲೀಷ್.

**ಬಿ.ಎ. 5 ಮತ್ತು 6 ಸೆಮಿಸ್ಟರ್‌ಗೆ ಅಳವಡಿಸಲಾದ ಮತ್ತು ವಿದ್ಯಾರ್ಥಿಗಳಿಗೆ ಲಭ್ಯವಿರುವ ಭಾಷಾವಿಷಯಗಳು :**
ಬಿ.ಎ. 5 ಮತ್ತು 6ನೇ ಸೆಮಿಸ್ಟರ್‌ಗೆ ವಿದ್ಯಾರ್ಥಿಗಳು ಕೆಳಕಾಣಿಸಿದ ಯಾವುದಾದರು ಒಂದು ಭಾಷಾ ವಿಷಯವನ್ನು ಆಯ್ದುಕೊಳ್ಳಬೇಕು.
ಕನ್ನಡ, ಸಂಸ್ಕೃತ, ಪ್ರಾಕೃತ, ಮರಾಠಿ, ಹಿಂದೀ, ಉರ್ದು, ಪರ್ಶಿಯನ್, ಫ್ರೆಂಚ್, ಜರ್ಮನ್ ಅಥವಾ ಎಡಿಶನಲ್ ಇಂಗ್ಲೀಷ.

ಬಿ. **ಗುಂಪು ಎರಡು : ಐಚ್ಛಿಕ ವಿಷಯಗಳು (Optional Subjects)**

ಈ ಕಾಲೇಜಿನಲ್ಲಿ ಓದಬಯಸುವ ಪದವಿ ವಿದ್ಯಾರ್ಥಿಗಳಿಗಾಗಿ ಒಟ್ಟು 83 ವಿಷಯ ಸಂಯೋಜನೆಗಳು (Subject Combinations) ಲಭ್ಯವಿರುತ್ತವೆ. ತಮ್ಮ ಭವಿಷ್ಯದ ಗುರಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಬ್ಬ ವಿದ್ಯಾರ್ಥಿಯು ಗರಿಷ್ಠ ಮೂರು ಸಂಯೋಜನೆಗಳಿಗೆ ಅರ್ಜಿ ಹಾಕಬೇಕಾಗುತ್ತದೆ. ವಿದ್ಯಾಥಿಗಳ ಅರ್ಹತೆ ಅಂದರೆ ಅಂಕಗಳಿಕೆಯನ್ನು ಆಧರಿಸಿ ಮೂರರಲ್ಲಿ ಯಾವುದಾದರು ಒಂದು ಸಂಯೋಜನೆಗೆ ಪ್ರವೇಶಾತಿ ನೀಡಲಾಗುತ್ತದೆ.

## List of Subject Combinations with Strength of Each Combination

| S. N... | Subject Combinations | | | Strength |
|---|---|---|---|---|
| 1 ...... | History | Political Science | Kannada | 10 |
| 2 ...... | History | Political Science | Sociology | 10 |
| 3 ...... | History | English | Sociology | 10 |
| 4 ...... | History | Kannada | Economics | 10 |
| 5 ...... | History | Political Science | Hindi | 5 |
| 6 ...... | History | Political Science | Folk litereture | 5 |
| 7 ...... | History | English | Geography | 5 |
| 8 ...... | History | English | Computer Applications | 5 |
| 9 ...... | History | English | Hindi | 5 |
| 10 .... | History | English | Anthropology | 5 |
| 11..... | History | Kannada | Public Administration | 5 |
| 12 .... | History | Kannada | Yoga | 5 |
| 13 .... | History | Economics | Hindi | 5 |
| 14 .... | History | English | Applied Statistics | 4 |
| 15 .... | History | English | Functional English | 4 |
| 16 .... | History | Kannada | Computer Applications | 4 |
| 17 .... | History | Economics | Geography | 4 |
| 18 .... | History | Political Science | English | 3 |
| 19 .... | History | Political Science | Economics | 3 |
| 20 .... | History | Political Science | Marati | 3 |
| 21 .... | History | Political Science | Urdu | 3 |
| 22 .... | History | Political Science | Criminology | 3 |
| 23 .... | History | Economics | Sanskrit | 3 |
| 24 .... | History | Economics | Yoga | 3 |
| 25 .... | History | Economics | Logic | 3 |
| 26 .... | History | Sociology | Psychology | 3 |
| 27 .... | History | Sociology | Religion | 3 |
| 28 .... | History | Sociology | Functional Hindi | 3 |
| 29 .... | History | Geography | Functional Kannada | 3 |
| 30 .... | History | Sanskrit | Philosophy | 3 |
| 31 .... | History | Yoga | Philosophy | 3 |
| 32 .... | History | Kannada | Prakrit | 2 |
| 33 .... | History | Sociology | Functional Kannada | 2 |
| 34 .... | History | Geography | Functional Hindi | 2 |
| 35 .... | History | Economics | Urdu | 2 |
| 36 .... | History | Economics | Persian | 2 |

| S. N. | Subject Combinations | | | Strength |
|---|---|---|---|---|
| 37 | History | Hindi | Music | 2 |
| 38 | History | Urdu | Persian | 3 |
| 39 | Political Science | Economics | Sociology | 10 |
| 40 | Political Science | Economics | Geography | 10 |
| 41 | Political Science | English | Philosophy | 6 |
| 42 | Political Science | Kannada | Journalism | 6 |
| 43 | Political Science | English | Sociology | 5 |
| 44 | Political Science | Geography | Criminology | 5 |
| 45 | Political Science | Kannada | Religion | 3 |
| 46 | Political Science | Economics | Folk litereture | 3 |
| 47 | Political Science | Geography | Prakrit | 3 |
| 48 | Political Science | Urdu | Criminology | 2 |
| 49 | English | Kannada | Journalism | 5 |
| 50 | English | Sociology | Journalism | 5 |
| 51 | English | Geography | Computer Application | 5 |
| 52 | English | Geography | Sanskrit | 5 |
| 53 | English | Psychology | Applied Statistics | 5 |
| 54 | English | Hindi | Journalism | 5 |
| 55 | English | Computer Application | Elements of Maths & Stat | 3 |
| 56 | English | Psychology | Journalism | 3 |
| 57 | English | French | Functional English | 3 |
| 58 | English | Pub. Administration | Philosophy | 3 |
| 59 | English | Psychology | Urdu | 2 |
| 60 | English | French | Journalism | 2 |
| 61 | English | Persian | Journalism | 2 |
| 62 | Kannada | Economics | Psychology | 5 |
| 63 | Kannada | Economics | Public Administration | 5 |
| 64 | Kannada | Pub. Administration | Linguistics | 5 |
| 65 | Kannada | Public Administration | Journalism | 3 |
| 66 | Kannada | Music | Linguistics | 3 |
| 67 | Economics | Computer Application | Hindi | 10 |
| 68 | Economics | Sociology | Yoga | 5 |
| 69 | Economics | Public Administration | Geography | 5 |
| 70 | Economics | Computer Application | Applied Statistics | 5 |
| 71 | Economics | Psychology | Applied Statistics | 5 |
| 72 | Economics | Anthropology | Public Administration | 5 |
| 73 | Economics | Psychology | Elements of Maths & Stat | 3 |
| 74 | Economics | Computer Application | Marathi | 2 |
| 75 | Sociology | Computer Application | Criminology | 5 |
| 76 | Sociology | Psychology | Criminology | 5 |

| S. N. | Subject Combinations | | | Strength |
|---|---|---|---|---|
| 71 | Economics | Psychology | Applied Statistics | 5 |
| 72 | Economics | Anthropology | Public Administration | 5 |
| 73 | Economics | Psychology | Elements of Maths & Statistics | 3 |
| 74 | Economics | Computer Application | Marathi | 2 |
| 75 | Sociology | Computer Application | Criminology | 5 |
| 76 | Sociology | Psychology | Criminology | 5 |
| 77 | Sociology | Public Administration | Journalism | 5 |
| 78 | Sociology | Public Administration | Religion | 3 |
| 79 | Geography | Computer Application | Journalism | 5 |
| 80 | Geography | Public Administration | Linguistics | 5 |
| 81 | Geography | Psychology | Journalism | 3 |
| 82 | Psychology | Hindi | Criminology | 5 |
| 83 | Psychology | Anthropology | Criminology | 5 |
| | | | Total | 360 |

ಸಿ. **ಗುಂಪು ಮೂರು : ಕಡ್ಡಾಯ / ಹೆಚ್ಚುವರಿ ವಿಷಯಗಳು (Compulsory /Additional)**

| **ಸೆಮಿಸ್ಟರ** | **ವಿಷಯಗಳು** |
|---|---|
| ಮೊದಲನೆಯ ಸೆಮಿಸ್ಟರ್ | ಭಾರತದ ಸಂವಿಧಾನ |
| ಎರಡನೆಯ ಸೆಮಿಸ್ಟರ್ | ಮಾನವಹಕ್ಕುಗಳು ಮತ್ತು ಪರಿಸರ ಅಧ್ಯಯನ |
| ಮೂರನೆಯ ಸೆಮಿಸ್ಟರ್ | ವ್ಯಕ್ತಿತ್ವ ವಿಕಸನ ಮತ್ತು ಸಂವಹನ ಕೌಶಲ್ಯಗಳು |
| ನಾಲ್ಕನೆಯ ಸೆಮಿಸ್ಟರ್ | ಕಂಪ್ಯೂಟರ್ ಅಪ್ಲಿಕೇಶನ್ಸ್ |

**ಆಂತರಿಕ ಮೌಲ್ಯಮಾಪನ :**

ಆಂತರಿಕ ಮೌಲ್ಯಮಾಪನಕ್ಕೆ 20 ಅಂಕಗಳಿರುತ್ತವೆ. ಸೆಮಿಸ್ಟರ್‌ನ 8ನೆಯ ಮತ್ತು 12ನೆಯ ವಾರದಲ್ಲಿ ಒಂದು ತಾಸಿನ ಎರಡು ಆಂತರಿಕ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಈ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ತೆಗೆದುಕೊಂಡ ಅಂಕಗಳನ್ನು 10 ಅಂಕಗಳಿಗೆ ಸರಾಸರಿ ತೆಗೆಯಲಾಗುತ್ತದೆ. ಇನ್ನುಳಿದ 10 ಅಂಕಗಳನ್ನು ವಿದ್ಯಾರ್ಥಿಗಳ ಹೋಮ್ ಅಸೈನ್‌ಮೆಂಟ್, ಪ್ರೊಜೆಕ್ಟ್ ವರ್ಕ್ ಮುಂತಾದ ಕೌಶಲ್ಯಗಳನ್ನು ಆಧರಿಸಿ ಕೊಡಲಾಗುತ್ತದೆ. ಸೆಮಿಸ್ಟರ್ ಕೊನೆಗೆ ವಿದ್ಯಾರ್ಥಿಯು 80 ಅಂಕಗಳ ಪ್ರಶ್ನೆಪತ್ರಿಕೆಗೆ ಉತ್ತರಿಸಬೇಕಾಗುತ್ತದೆ. ಪ್ರತಿ ಸೆಮಿಸ್ಟರ್‌ನಲ್ಲಿ ಆಂತರಿಕ ಪರೀಕ್ಷೆ ತೆಗೆದುಕೊಳ್ಳುವುದು, ಪ್ರೊಜೆಕ್ಟ್ ವರ್ಕ್ ಮತ್ತು ಅಸೈನ್‌ಮೆಂಟ್ ಪೂರೈಸುವುದು ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿರುತ್ತವೆ.

## ವಾಣಿಜ್ಯ ವಿಭಾಗ

**ಪಿ.ಯು.ಸಿ. ಪ್ರಥಮ ವರ್ಷ :**

1. ಇಂಗ್ಲೀಷ ಬೇಸಿಕ್ ಕಡ್ಡಾಯವಾಗಿದೆ.
2. ಕೆಳಕಾಣಿಸಿದ ಯಾವುದಾದರೊಂದು ಭಾಷೆಯನ್ನು ಆಯ್ದುಕೊಳ್ಳಬೇಕು.
   ಕನ್ನಡ, ಹಿಂದೀ, ಮರಾಠಿ, ಉರ್ದು, ಫ್ರೆಂಚ್.
3. ಈ ಕೆಳಗಿನ ಗುಂಪುಗಳಲ್ಲಿ ಯಾವುದಾದರೊಂದು ಗುಂಪನ್ನು ಆಯ್ದುಕೊಳ್ಳಬೇಕು.
   ಗುಂಪು 1. ಬಿಜಿನೆಸ್ ಸ್ಟಡೀಸ್, ಅಕೌಂಟೆನ್ಸಿ, ಸಂಖ್ಯಾಶಾಸ್ತ್ರ, ಅರ್ಥಶಾಸ್ತ್ರ
   ಗುಂಪು 2. ಬಿಜಿನೆಸ್ ಸ್ಟಡೀಸ್, ಅಕೌಂಟೆನ್ಸಿ, ಸಂಖ್ಯಾಶಾಸ್ತ್ರ, ಬೇಸಿಕ್ ಗಣಿತ

## B.COM: SUBJECTS OFFERED

### B.Com I Semster

1.1 Basic English
1.2 Basic MIL

CORE PAPER

1.3 Financial Accounting -I
1.4 Principal of Management
1.5 Business Environment
1.6 Managerial Economics-I

COMPULSORY PAPER

1.7 Indian Constitution Compulsory Paper (to be studied by Non- Commerce stream)
1.8 Fundamental Accounting-I
1.9 Fundamentals of Commerce-I

### B.Com II Semster

2.1 Basic English
2.2 Basic MIL

CORE PAPER

2.2 Financial Accounting - II
2.4 Business Communication Skills
2.5 Entrepreneurship & Small Enterprise Management/ Business Mathematics
2.6 Managerial Economics-II
2.7 Fundamental of Computers

COMPULSORY PAPER (to be studied by Non-Commerce Strea

2.8 Fundamental of Accounting-II
2.9 Fundamental of Commerce-II

### B.Com III Semster

3.1 Corporate Accounting-I
3.2 Principals of Marketing
3.3 Secretarial Practice
3.4 Human Resource Management
3.5 Monetary Economics
3.6 Business Statistics-I(to be studied by students who have not studied by students who have not studied statstics at PUC)
3.7 Commerical Arithmetic-I(to be studied by students who have not studied statistics at PUC)
3.8 Computer Application
3.9 Basic Kannada

### B.Com IV Semster

4.1 Corporate Accounting-II
4.2 Law & Practice of Banking
4.3 Fundamental of Functional Management
4.4 Indian Financial System
4.5 International Economics
4.6 Business Statistics-II (to be studied by students who have not studied statistics at PUC)
4.7 Commercial Arithmetic-II (to be studied by students who have not studied statistics at PUC)
4.8 Computer Application-II
4.9 Basic Kannada

## B.Com V Semster

5.1 Cost Accounting-I
5.2 Income Tax-Law& Practice-I
5.3 Principal of Practice of Auditing
5.4 Indian Economics
5.5 Computer Applications
5.6 Elective Paper-I
5.7 Elective Paper-II

## B.Com VI Semster

6.1 Cost Accounting-II
6.2 Income Fax-Law & Practice-II
6.3 Business Laws
6.4 Industrial Economics
6.5 Computer Applications at Business
6.6 Elective Paper-III
6.7 Elective Paper-IV

### ELECTIVE GROUP

(The students shall choose one of the elective groups only)

| Sl.No. | Title of Subjects | Sl.No. | Title of Subjects |
|---|---|---|---|
| 5.6. | Paper - I Finance Services | 5.6 | Paper-I Finance Services |
| 5.7 | Paper-II Accounts Theory | 5.8 | Paper-II Retail Marketing |
| 6.6. | Paper-III Accounts Theory | 6.6 | Paper-III Principles of Foreign Exchange |
| 6.7 | Paper-IV Management Accounting | 6.7 | Paper-IV Service Marketing |

### ಪ್ರವೇಶ ಶುಲ್ಕ ವಿವರ

ಆಯಾ ತರಗತಿಗಳಿಗೆ ಹಿಂದಿನ ವರ್ಷದ ಪರೀಕ್ಷೆಗಳ ಫಲಿತಾಂಶವು ಪ್ರಕಟವಾದ ಕೂಡಲೇ ಪ್ರವೇಶ ಪ್ರಕ್ರಿಯೆಯು ಪ್ರಾರಂಭವಾಗುವುದು. ಕಾಲೇಜಿನ ಕಚೇರಿಯಿಂದ ರವಿವಾರ ಹಾಗೂ ರಜಾ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಮುಂಜಾನೆ 10.30 ರಿಂದ ಮಧ್ಯಾಹ್ನ 2.00 ಘಂಟೆಯ ವರೆಗೆ ಮತ್ತು ಶನಿವಾರದಂದು ಮುಂಜಾನೆ 10.30 ರಿಂದ ಮಧ್ಯಾಹ್ನ 12.30ರವರೆಗೆ ಚಲನ್ ಪಡೆದು ಪ್ರವೇಶ ಶುಲ್ಕವನ್ನು ಕಾಲೇಜು ಆವರಣದಲ್ಲಿರುವ ಸಿಂಡಿಕೇಟ್ ಬ್ಯಾಂಕಿನಲ್ಲಿ ತುಂಬಿ, ಚಲನ್ ಪ್ರತಿಯನ್ನು ಕೂಡಲೇ ಕಚೇರಿಯಲ್ಲಿ ಸಂಬಂಧಿಸಿದ ವರ್ಗದ ಸಹಾಯಕರಿಗೆ ತಲುಪಿಸಿ ಪ್ರವೇಶ ಖಚಿತ ಪಡಿಸಿಕೊಳ್ಳಬೇಕು. ಇಲ್ಲವಾದರೆ ಪ್ರವೇಶವು ರದ್ದಾಗುವುದು. ವರ್ಗವಾರು ಪ್ರವೇಶ ಶುಲ್ಕದ ವಿವರಗಳನ್ನು ಪ್ರವೇಶದ ಸಂದರ್ಭದಲ್ಲಿಯೇ ಕಚೇರಿಯಲ್ಲಿ ಪ್ರಕಟಿಸಲಾಗುವುದು.

1) ಫಂಕ್ಷನಲ್ ಇಂಗ್ಲೀಷ್, ಫಂಕ್ಷನಲ್ ಹಿಂದಿ, ಫಂಕ್ಶನಲ್ ಕನ್ನಡ, ಸಾರ್ವಜನಿಕ ಆಡಳಿತ ಮತ್ತು ಫಂಕ್ಷನಲ್ ಕನ್ನಡ ವಿಷಯ ತೆಗೆದುಕೊಂಡ ವಿದ್ಯಾರ್ಥಿಗಳು ನಿಗದಿತ ಶುಲ್ಕವನ್ನು ತುಂಬುವುದರ ಜೊತೆಗೆ ಪ್ರತಿ ವರ್ಷ ರೂ.1005=00 ರಂತೆ ಅಭಿವೃದ್ಧಿ ಶುಲ್ಕ ತುಂಬಬೇಕು.
2) ಬಿ.ಕಾಂ. ತರಗತಿಗೆ ಕಂಪ್ಯೂಟರ್ ಅಪ್ಲಿಕೇಶನ್ಸ್ ಇನ್ ಬಿಜಿನೆಸ್ ವಿಷಯ ಕಡ್ಡಾಯವಾಗಿದ್ದು, ಇದಕ್ಕಾಗಿ ರೂ. 2013=00 ಅಭಿವೃದ್ಧಿ ಶುಲ್ಕ ತುಂಬಬೇಕು.
3) ಬಿ.ಎ. ತರಗತಿಗೆ ಕಂಪ್ಯೂಟರ್ ಅಪ್ಲಿಕೇಶನ್ಸ್ ಐಚ್ಛಿಕ ವಿಷಯವನ್ನು ಅಭ್ಯಸಿಸುವ ವಿದ್ಯಾರ್ಥಿಗಳು ರೂ. 2013=00 ಅಭಿವೃದ್ಧಿ ಶುಲ್ಕ ತುಂಬಬೇಕು.

4) ಬಿ.ಎ. ತರಗತಿಗೆ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಐಚ್ಛಿಕ ವಿಷಯವನ್ನು ಅಭ್ಯಸಿಸುವ ವಿದ್ಯಾರ್ಥಿಗಳು ರೂ. 1830=00 ಅಭಿವೃದ್ಧಿ ಶುಲ್ಕ ತುಂಬಬೇಕು.

5) ಬಿ.ಎಸ್.ಡಬ್ಲು ತರಗತಿಗಳಿಗೆ ನಿಗದಿತ ಶುಲ್ಕದೊಂದಿಗೆ ಕೆಟಗರಿಗೆ ಅನುಗುಣವಾಗಿ ಅಭಿವೃದ್ಧಿ ಶುಲ್ಕ ತುಂಬಬೇಕಾಗುತ್ತದೆ.

**ಪಿ.ಯು.ಸಿ. ಪ್ರಥಮ, ದ್ವಿತೀಯ ಮತ್ತು ಬಿ.ಎ., ಬಿ.ಕಾಂ 1, 3 ಮತ್ತು 5 ನೇ ಸೆಮಿಸ್ಟರ್ ತರಗತಿಗಳಿಗೆ ಪ್ರವೇಶ ಪಡೆಯಲು ಇರುವ ಕೊನೆಯ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮಹಾವಿದ್ಯಾಲಯದ ವೆಬ್‌ಸೈಟ್ www.kacd.ac.in ಸಂಪರ್ಕಿಸಬಹುದು**

**ವೃತ್ತಿಪರ ಶಿಕ್ಷಣ :**

ನಮ್ಮ ಕಾಲೇಜಿನಲ್ಲಿ ವೃತ್ತಿಪರ ಶಿಕ್ಷಣವನ್ನು ನೀಡಲು ಪ್ರತ್ಯೇಕ ಭಾಷಾ ಪ್ರಯೋಗಶಾಲೆ, ಕಂಪ್ಯೂಟರ್‌ಗಳು, ಕನ್ನಡ, ಹಿಂದೀ ಮತ್ತು ಇಂಗ್ಲೀಷ್ ಟೈಪಿಂಗ್ ತರಬೇತಿ ಅಲ್ಲದೇ ಇನ್ನಿತರ ಶ್ರವಣ ಹಾಗೂ ದೃಶ್ಯ ಮಾಧ್ಯಮಗಳ ಅನುಕೂಲತೆ ಇದೆ. ಕೆಳಕಾಣಿಸಿದ ವೃತ್ತಿಪರ ವಿಷಯಗಳಲ್ಲಿ ಶಿಕ್ಷಕರಿಂದ ಬೋಧನೆಯ ಸೌಲಭ್ಯ ಕಲ್ಪಿಸಲಾಗಿದೆ.

**1) ಫಂಕ್ಷನಲ್ ಇಂಗ್ಲೀಷ್ (ಕ್ರಿಯಾತ್ಮಕ ಇಂಗ್ಲೀಷ್):**

ಫಂಕ್ಷನಲ್ ಇಂಗ್ಲೀಷ್ ಐಚ್ಛಿಕ ವಿಷಯದ ಧ್ಯೇಯೋದ್ಧೇಶಗಳು ಈ ಕೆಳಗಿನಂತಿವೆ.

- ಶುದ್ಧವಾದ ಉಚ್ಚಾರಣೆ ಹಾಗೂ ಸ್ವರದ ಏರಿಳಿತದ ನಿಯಮ ಪಾಲನೆಯೊಂದಿಗೆ ಇಂಗ್ಲೀಷ್ ಮಾತಾಡಲು ತರಬೇತಿ ನೀಡುವುದು.
- ವ್ಯಾಕರಣ ದೋಷವಿಲ್ಲದಂತೆ ಇಂಗ್ಲೀಷ್ ಬರೆಯಲು ಕಲಿಸುವುದು.
- ಶುದ್ಧ ಹಾಗೂ ಸರಳ ಇಂಗ್ಲೀಷ್ ಭಾಷೆಯಲ್ಲಿ ಟಿಪ್ಪಣಿ ಬರೆದುಕೊಳ್ಳುವುದು.
- ವಾಕ್ಯಪರಿಚ್ಛೇಧ ರಚಿಸುವುದು ಹಾಗೂ ಬರವಣಿಗೆಯ ತಂತ್ರಗಳನ್ನು ಬಳಸುವ ಬಗ್ಗೆ ತರಬೇತಿ.
- ಇಂಗ್ಲೀಷ್ ಸಂಭಾಷಣೆ, ಭಾಷಣ, ಚರ್ಚೆ ಇತ್ಯಾಧಿಗಳಲ್ಲಿ ಭಾಗವಹಿಸಲು, ವರದಿ ತಯಾರಿಸಲು, ಕಂಪನಿಗಳಲ್ಲಿ ಹಾಗೂ ಹೊಟೇಲುಗಳಲ್ಲಿ ಸ್ವಾಗತಕಾರರಾಗಿ ಕೆಲಸ ನಿರ್ವಹಿಸಲು ಮತ್ತು ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

**೨) ಫಂಕ್ಷನಲ್ ಹಿಂದೀ (ಕ್ರಿಯಾತ್ಮಕ ಹಿಂದೀ) :**

- ಹಿಂದೀ ಭಾಷೆಯ ಬಳಕೆಯಲ್ಲಿ ಸೂಕ್ತ ತರಬೇತಿ ನೀಡುವ ಉದ್ಧೇಶದಿಂದ ಈ ಕೋರ್ಸು ಪ್ರಾರಂಭಿಸಲಾಗಿದೆ. ವ್ಯವಹಾರದಲ್ಲಿ, ಆಡಳಿತದಲ್ಲಿ, ಸರಕಾರಿ ಕಚೇರಿಗಳಲ್ಲಿ, ಸಾರ್ವಜನಿಕ ಸಂಸ್ಥೆ, ಬ್ಯಾಂಕು, ರೇಲ್ವೆ, ವಾಯುಯಾನ ಹಾಗೂ ಇತರೆ ಕಂಪನಿಗಳಲ್ಲಿ ಕಾರ್ಯನಿರ್ವಹಣೆಗೆ ಅವಶ್ಯವಿರುವ ಹಿಂದೀ ಭಾಷೆಯನ್ನು ಇಲ್ಲಿ ಕಲಿಸಲಾಗುವುದು.
- ಈ ವಿಷಯವನ್ನು ಅಭ್ಯಸಿಸಿದವರು ಟ್ಯುಟರ್, ಟೈಪಿಸ್ಟ್, ಭಾಷಾಂತರಕಾರ, ಅನೌನ್ಸರ್, ಜಾಹೀರಾತುದಾರ, ವಾಣಿಜ್ಯ ಮತ್ತು ವ್ಯವಹಾರ ಸಂಸ್ಥೆಗಳಲ್ಲಿ ಸಹಾಯಕ, ವರದಿಗಾರ ಮತ್ತು ಸ್ವಾಗತಕಾರರಾಗಿ ಕೆಲಸ ಮಾಡಬಹುದು.
- ಈ ವಿಷಯವನ್ನು ಅಭ್ಯಸಿಸಬಯಸುವವರು ಪಿ.ಯು.ಸಿ.ಯಲ್ಲಿ ಕಡ್ಡಾಯವಾಗಿ ಹಿಂದೀ ತೆಗೆದುಕೊಂಡಿರಬೇಕು. ಫಂಕ್ಷನಲ್ ಹಿಂದೀ ತೆಗೆದುಕೊಳ್ಳುವವರು ಬೇಸಿಕ್ ಇಂಗ್ಲೀಷ್ ಅಥವಾ ಐಚ್ಛಿಕ ಇಂಗ್ಲೀಷ್ ತೆಗೆದುಕೊಳ್ಳಬೇಕಾಗುತ್ತದೆ.

**೩) ಕ್ರಿಯಾತ್ಮಕ ಕನ್ನಡ :**

- ಕನ್ನಡವು ಕರ್ನಾಟಕದ ಪ್ರಾದೇಶಿಕ ಭಾಷೆಯಾಗಿದ್ದು, ಇತ್ತೀಚಿನ ದಿನಗಳಲ್ಲಿ ಆಡಳಿತ ಭಾಷೆಯಾಗಿ ಅಗ್ರಸ್ಥಾನ ಪಡೆದಿದೆ. ಈ ವಿಷಯವನ್ನು ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳೊಂದಿಗೆ ಪತ್ರ ವ್ಯವಹಾರವನ್ನು ಸರಿಯಾಗಿ ನಿರ್ವಹಿಸುವುದಕ್ಕೆ ಬೇಕಾದ ತರಬೇತಿಯನ್ನು ನೀಡಲಾಗುತ್ತದೆ.
- ಕನ್ನಡ ಭಾಷೆಯ ಶುದ್ಧ ಉಚ್ಚಾರಣೆ ಮತ್ತು ಬರವಣಿಗೆಯ ಬಗ್ಗೆ ತಿಳಿಸಲಾಗುವುದು. ಕನ್ನಡದಲ್ಲಿ ಟೈಪಿಂಗ್ ಶೀಘ್ರಲಿಪಿ ಕಂಪ್ಯೂಟರ್ ಟೈಪಿಂಗ್ ಕಲಿಸಲಾಗುವುದು.
- ಕನ್ನಡದಲ್ಲಿ ವರದಿಗಾರರಾಗಿ, ಭಾಷಣಕಾರರಾಗಿ ಮತ್ತು ಬರಹಗಾರರಾಗಿ ರೂಪುಗೊಳ್ಳಲು ಇದರಿಂದ ಅನುಕೂಲವಾಗುವುದು.

**ಕಚೇರಿ ಸಮಯ :**

ಮಹಾವಿದ್ಯಾಲಯದ ಕಚೇರಿಯು ರಜೆ ದಿನಗಳನ್ನು ಹೊರತು ಪಡಿಸಿ, ಬೆಳಿಗ್ಗೆ 10.30 ಘಂಟೆಯಿಂದ ಸಾಯಂಕಾಲ 6.00 ಘಂಟೆಯವರೆಗೆ ಹಾಗೂ ಶನಿವಾರ ಬೆಳಿಗ್ಗೆ 10.30 ಘಂಟೆಯಿಂದ ಮಧ್ಯಾಹ್ನ 2.30 ರ ವರೆಗೆ ಕಾರ್ಯ ನಿರ್ವಹಿಸುತ್ತದೆ.

## ವಿದ್ಯಾರ್ಥಿಗಳಿಗಿರುವ ಸೌಲಭ್ಯಗಳು

❖ **ಡಾ. ವ್ಹಿ.ಕೆ. ಗೋಕಾಕ ಕೇಂದ್ರ ಗ್ರಂಥಾಲಯ :**

ಡಾ. ವ್ಹಿ.ಕೆ. ಗೋಕಾಕ ಕೇಂದ್ರ ಗ್ರಂಥಾಲಯ, ಸುಮಾರು ಎರಡು ಲಕ್ಷಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ಹೊಂದಿದ್ದು, ಅರವತ್ತಾರು ನಿಯತಕಾಲಿಕೆಗಳ, ಜೊತೆಗೆ ಇ-ಜರ್ನಲ್ ಸೌಲಭ್ಯ ಕೂಡ ಹೊಂದಿದೆ. ಪ್ರತಿ ದಿನ ಮುಂಜಾನೆ 8.00 ರಿಂದ ರಾತ್ರಿ 8.00 ರವರೆಗೆ ಕೆಲಸ ನಿರ್ವಹಿಸುವ ಈ ಗ್ರಂಥಾಲಯದಲ್ಲಿ 350 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕುಳಿತು ಅಧ್ಯಯನ ಮಾಡಲು ಅವಕಾಶವಿದೆ. ಗುರುತಿನ ಚೀಟಿ ಹೊಂದಿದ ವಿದ್ಯಾರ್ಥಿಗಳಿಗೆ ಮನೆಯಲ್ಲಿ ಓದಲು ಪುಸ್ತಕಗಳನ್ನು ನೀಡಲಾಗುವುದು. ಇಲ್ಲಿ ಐದು ಬುಕ್ ಬ್ಯಾಂಕುಗಳು ಇದ್ದು, ಅರ್ಹ ಹಾಗೂ ಬಡ ವಿದ್ಯಾರ್ಥಿಗಳಿಗೆ ಇಡೀ ವರ್ಷ ಪುಸ್ತಕಗಳನ್ನು ಎರವಲು ನೀಡಲಾಗುವುದು. ಇದಲ್ಲದೇ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪುಸ್ತಕ ಎರವಲು ನೀಡುವ ವಿಶೇಷ ವ್ಯವಸ್ಥೆ ಇರುವುದು. ಗ್ರಂಥಾಲಯದಲ್ಲಿ ಒಂದು ಝರಾಕ್ಸ್ ಯಂತ್ರವಿದ್ದು, ಅದು ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಸೇವೆ ಒದಗಿಸುತ್ತದೆ. ವಿದ್ಯಾರ್ಥಿಗಳಿಗೆ ಗ್ರಂಥಾಲಯದಲ್ಲಿ ಅಂತರ್ಜಾಲ ಸೌಲಭ್ಯ ಕಲ್ಪಿಸಲಾಗಿದೆ. ಈ ಗ್ರಂಥಾಲಯದ ಸಮೀಪದಲ್ಲಿಯೇ ನಿರ್ಮಿಸಲಾದ 24 X 7 ರೀಡಿಂಗ್ ರೂಮ್ ಉದ್ಘಾಟನೆಗೆ ಸಿದ್ಧವಾಗಿದ್ದು ಇದರಲ್ಲಿ ವಿದ್ಯಾರ್ಥಿಗಳು ಸಮಯದ ನಿರ್ಬಂಧವಿಲ್ಲದೇ ಅಧ್ಯಯನ ಮಾಡಬಹುದಾಗಿದೆ.

❖ **ಹಾಸ್ಟೇಲ್ (ವಸತಿನಿಲಯಗಳು) :**

ಕರ್ನಾಟಕ ಕಲಾ ಮಹಾವಿದ್ಯಾಲಯವು ವಿದ್ಯಾರ್ಥಿಗಳಿಗಾಗಿ **ನೇತ್ರಾವತಿ** (ಉದಯ) ಮತ್ತು **ಅಘನಾಶಿನಿ** ಎಂಬ ಎರಡು ವಿದ್ಯಾರ್ಥಿನಿಯಮಗಳನ್ನು ಹಾಗೂ ವಿದ್ಯಾರ್ಥಿನಿಯರಿಗಾಗಿ **ಕಾವೇರಿ** ವಿದ್ಯಾರ್ಥಿನಿಲಯ ಸೌಲಭ್ಯವನ್ನು ಹೊಂದಿದೆ ಹಾಗೂ 2012-13 ರಿಂದ ಯು.ಜಿ.ಸಿ. 11ನೇ ಯೋಜನೆಯಡಿಯಲ್ಲಿ ಹೊಸದಾಗಿ ನಿರ್ಮಿಸಿದ **ಕಾವೇರಿ ಹಾಸ್ಟೆಲ್ ಬ್ಲಾಕ್ 2** ರಲ್ಲಿ ಆಧುನಿಕ ಸೌಲಭ್ಯಗಳನ್ನೊಳಗೊಂಡ ಅನುಕೂಲತೆಗಳನ್ನು ವಿದ್ಯಾರ್ಥಿಯರಿಗಾಗಿ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಮೆರಿಟ್ ಮತ್ತು ಮೀಸಲಾತಿ ನಿಯಮಗಳಿಗನುಗುಣವಾಗಿ ನಿಗದಿತ ಸಂಖ್ಯೆಯ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲಾಗುತ್ತದೆ.

❖ **ಕ್ರೀಡಾ ವಿಭಾಗ :**

ಕ್ರೀಡಾಪಟುಗಳಿಗಾಗಿ ಕಾಲೇಜಿನಲ್ಲಿ ಕೆಳಕಾಣಿಸಿದ ಸೌಲಭ್ಯಗಳಿವೆ.

| | | |
|---|---|---|
| **01.** ಬಾಸ್ಕೆಟ್‌ಬಾಲ್ ಕೋರ್ಟ್ | **05.** ಹಾಕಿ ಮೈದಾನ | **09.** ಟೆನಿಕ್ವಾಯಿಟ್ |
| **02.** ವ್ಹಾಲಿಬಾಲ್ ಕೋರ್ಟ್ | **06.** ಕ್ರಿಕೆಟ್ ಮೈದಾನ | **10.** ಖೋ ಖೋ & ಕಬಡ್ಡಿ ಮೈದಾನ |
| **03.** ಟೆನಿಸ್‌ಕೋರ್ಟ್ | **07.** ಟೇಬಲ್ ಟೆನ್ನಿಸ್ | **11.** ಫುಟ್‌ಬಾಲ್ ಮೈದಾನ |
| **04.** ಬ್ಯಾಡ್ಮಿಂಟನ್ ಹಾಲ್ | **08.** ಅಥ್ಲೆಟಿಕ್ಸ್ ಟ್ರ್ಯಾಕ್ | **12.** ಜಿಮ್ನಾಸಿಯಂ ಬಾರ್ |

**13.** ಯು.ಜಿ.ಸಿ. ಅನುದಾನದಿಂದ ಸಿಂಗಲ್ ಸ್ಟೇಶನ್ ಕಂಡಿಶನಿಂಗ್ ಇಕ್ವಿಪಮೆಂಟ್ಸ್

❖ **ಜಿಮಖಾನ :**

ಕಾಲೇಜಿನ ಜಿಮಖಾನಾದಲ್ಲಿ ಸಾಂಸ್ಕೃತಿಕ, ಚರ್ಚಾಕೂಟ ಮತ್ತು ಭಿತ್ತಿಪತ್ರ, ವಾಚನಾಲಯ, ಕ್ರೀಡೆ, ಕ್ರಿಕೆಟ್, ಬ್ಯಾಡ್ಮಿಂಟನ್ ಮತ್ತು ಒಳಾಂಗಣ ಆಟಗಳು, ಫುಟ್‌ಬಾಲ್, ವ್ಹಾಲಿಬಾಲ್ ಮತ್ತು ಬಾಸ್ಕೆಟ್‌ಬಾಲ್, ಹಾಕಿ, ಭಾರತೀಯ ಆಟಗಳು, ಎನ್.ಸಿ.ಸಿ/ ಎನ್.ಎಸ್.ಎಸ್. ಮತ್ತು ಮಿಸಲೆನಿ ಎಂಬ ಒಟ್ಟು 13 ವಿಭಾಗಗಳಿವೆ. ಇವುಗಳಿಗೆ ಶಿಕ್ಷಕರು ಕಾರ್ಯಾಧ್ಯಕ್ಷರಾಗಿ ಮತ್ತು ಅರ್ಹತೆಯ ಮೇರೆಗೆ ಆಯ್ಕೆಗೊಂಡ ವಿದ್ಯಾರ್ಥಿಗಳು ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ವಿದ್ಯಾರ್ಥಿಗಳ ಕ್ರೀಡಾ

ಪ್ರತಿಭೆಯನ್ನು, ಸಾಹಿತ್ಯಿಕ ಆಸಕ್ತಿಯನ್ನು ಪ್ರೋತ್ಸಾಹಿಸಲು ಜಿಮಖಾನಾದಿಂದ ಪುರಸ್ಕಾರಗಳನ್ನು ನೀಡಲಾಗುತ್ತದೆ. ರ್‍ಯಾಂಕ್ ವಿಜೇತ, ಸಾಂಸ್ಕೃತಿಕ, ಎನ್.ಸಿ.ಸಿ., ಎನ್.ಎಸ್.ಎಸ್. ಮತ್ತು ಕ್ರೀಡಾ ಕ್ಷೇತ್ರದಲ್ಲಿ ವಿಶೇಷ ಸಾಧನೆಗೈದ ವಿದ್ಯಾರ್ಥಿಗಳನ್ನು ಪ್ರತಿ ವರ್ಷ ಜಿಮಖಾನಾದಿಂದ ಪುರಸ್ಕರಿಸಲಾಗುತ್ತದೆ.

**❖ ವಿದ್ಯಾರ್ಥಿಧಾಮ :**

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮತ್ತು ಅವರು ತಮ್ಮ ಬಿಡುವಿನ ವೇಳೆಯನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲು ಕಾಲೇಜಿನ ಆವರಣದಲ್ಲಿಯೇ ವಿದ್ಯಾರ್ಥಿಧಾಮವಿದೆ. ಇಲ್ಲಿ ವೃತ್ತಪತ್ರಿಕೆ, ನಿಯತಕಾಲಿಕೆ ಮತ್ತು ವಾರಪತ್ರಿಕೆಗಳನ್ನು ಓದಲು ಅವಕಾಶವಿದೆ. ಮುಖ್ಯ ಕಟ್ಟಡದಲ್ಲಿ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಪ್ರತ್ಯೇಕ ವಿಶ್ರಾಂತಿ ಕೊಠಡಿಯನ್ನು ಕಾಲೇಜು ಹೊಂದಿದೆ.

**❖ ಮಿಸಲೆನಿ :**

ಈ ಕಾಲೇಜಿನಲ್ಲಿ ಪ್ರತಿವರ್ಷ **'ನಿನಾದ'** ಎಂಬ ವಾರ್ಷಿಕ ಸಂಚಿಕೆಯನ್ನು ಪ್ರಕಟಿಸಲಾಗುತ್ತದೆ. ಇದು ಕಾಲೇಜಿನಲ್ಲಿ ನಡೆಯುವ ವಿದ್ಯಾರ್ಥಿಗಳ ಎಲ್ಲ ಚಟುವಟಿಕೆ ಮತ್ತು ಸಾಧನೆಗಳ ಮುಖವಾಣಿಯಾಗಿದ್ದು, ಅವರ ಆಯ್ದ ಬರಹಗಳನ್ನು ಪ್ರಕಟಿಸುತ್ತದೆ. ಇದಕ್ಕೆ ಒಬ್ಬ ಪ್ರಾಧ್ಯಾಪಕರು ಸಂಪಾದಕರಾಗಿ ಮತ್ತು ಒಬ್ಬ ಅರ್ಹ ವಿದ್ಯಾರ್ಥಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಾರೆ. ಕಾಲೇಜಿನ ಇತಿಹಾಸದ ಮಹತ್ವದ ಘಟನೆಗಳ ದಾಖಲೆಯಾಗಿ ಮತ್ತು ವಿದ್ಯಾರ್ಥಿಗಳಲ್ಲಿನ ಸುಪ್ತಪ್ರತಿಭೆಯನ್ನು ಅನಾವರಣಗೊಳಿಸುವಲ್ಲಿ **ನಿನಾದವು** ಮಹತ್ವದ ಪಾತ್ರ ನಿರ್ವಹಿಸುತ್ತದೆ.

**❖ ಸಂಗೀತ ಶಿಕ್ಷಣ :**

ಕರ್ನಾಟಕ ಕಲಾ ಮಹಾವಿದ್ಯಾಲಯದ ಕ್ಯಾಂಪಸ್ಸಿನಲ್ಲಿಯೇ ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯವಿದೆ. ಇದು ರಾಷ್ಟ್ರೀಯ ಖ್ಯಾತಿಪಡೆದ ಸಂಗೀತ ಶಿಕ್ಷಕರನ್ನು ಹೊಂದಿದೆ. ಇಲ್ಲಿ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಸಂಗೀತ ವಿಷಯ ಬೋಧಿಸುವ ವ್ಯವಸ್ಥೆ ಇರುವುದು. ಕಲಾಮಹಾವಿದ್ಯಾಲಯದಲ್ಲಿನ ಆಸಕ್ತ ವಿದ್ಯಾರ್ಥಿಗಳು ಹಿಂದೂಸ್ಥಾನಿ ಸಂಗೀತವಲ್ಲದೇ ಸಿತಾರ್, ತಬಲಾ, ವಯೋಲಿನ್ ಮುಂತಾದ ವಾದ್ಯ ಸಂಗೀತಗಳನ್ನು ತಮ್ಮ ಐಚ್ಛಿಕ ವಿಷಯಗಳನ್ನಾಗಿ ಅಭ್ಯಸಿಸಬಹುದು.

**❖ ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ಘಟಕ :**

ಕರ್ನಾಟಕ ಕಾಲೇಜಿನಲ್ಲಿ ಎನ್.ಸಿ.ಸಿ. ಘಟಕ ಇದೆ. ಕಾಲೇಜಿನ ಅರ್ಹ ಪ್ರಾಧ್ಯಾಪಕರು, ಎನ್.ಸಿ.ಸಿ. ಅಧಿಕಾರಿಯಾಗಿರುತ್ತಾರೆ. ಅವರ ಮಾರ್ಗದರ್ಶನದಲ್ಲಿ ಎನ್.ಸಿ.ಸಿ. ತರಬೇತಿ ನೀಡಲಾಗುತ್ತಿದ್ದು, ಪರೀಕ್ಷೆಗಳನ್ನು ಪ್ರತಿವರ್ಷ ನಡೆಸಲಾಗುತ್ತದೆ. ಅಲ್ಲದೇ ಈ ಕಾಲೇಜಿನಲ್ಲಿ ಎರಡು ಎನ್.ಎಸ್.ಎಸ್ ಘಟಕಗಳಿದ್ದು, ಪ್ರತಿ ಘಟಕಕ್ಕೆ ಒಬ್ಬರು ಪ್ರಾಧ್ಯಾಪಕರು ಅದರ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಅವರು ವಿದ್ಯಾರ್ಥಿಗಳಿಗೆ ಸಮಾಜಸೇವೆ, ದೇಶಪ್ರೇಮ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಗಳಲ್ಲಿ ಮಾರ್ಗದರ್ಶನ ನೀಡುತ್ತಾರೆ.

**❖ ಉದ್ಯೋಗ ಮಾಹಿತಿ ಕೇಂದ್ರ. :**

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ನೀಡುವ ಕೇಂದ್ರವು ಗ್ರಂಥಾಲಯದಲ್ಲಿ ನಿಯಮಿತವಾಗಿ ಕೆಲಸ ನಿರ್ವಹಿಸುತ್ತದೆ.

**❖ ಯು.ಜಿ.ಸಿ.ಯ ಅಂತರ್ಜಾಲ ಸಂಪನ್ಮೂಲ ಕೇಂದ್ರ.:**

ಕಾಲೇಜಿನ ಪ್ರಾಧ್ಯಾಪಕರು ಬೋಧನೆಗೆ ಸಂಬಂಧಿಸಿದ ಪೂರಕ ಮಾಹಿತಿ ಸಂಗ್ರಹಿಸಲು, ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಮಟ್ಟದ ಸಂಶೋಧನಾ ಮಾಹಿತಿ ಸಾಮಗ್ರಿಯನ್ನು ಪಡೆಯಲು ಸಹಾಯಕವಾಗಿರುತ್ತದೆ. ಅಲ್ಲದೇ, ಸರಕಾರಿ ಆದೇಶ, ಸುತ್ತೋಲೆ ಮತ್ತು ಅಧಿಸೂಚನೆ ಮುಂತಾದ ವಿವರಗಳನ್ನು ಪಡೆಯಬಹುದಾಗಿದೆ. ವಿದ್ಯಾರ್ಥಿಗಳು ಸಹ ಇದರ ಉಪಯೋಗವನ್ನು ಪಡೆಯಬಹುದು.

**❖ ಪ್ಲೇಸ್‌ಮೆಂಟ್ ಸೆಲ್ :**

ಕಾಲೇಜಿನಲ್ಲಿ ಬಿ.ಬಿ.ಎ.ಬಿ.ಸಿ.ಎಸ್., ಬಿ.ಎಸ್.ಡಬ್ಲ್ಯೂ ಪತ್ರಿಕೋದ್ಯಮ ಮುಂತಾದ ವೃತ್ತಿಪರ ಕೋರ್ಸಗಳನ್ನು ಹಾಗೂ ವಿಷಯಗಳನ್ನು ಅಭ್ಯಸಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಒದಗಿಸುವುದಕ್ಕಾಗಿ ಪ್ಲೇಸಮೆಂಟ್‌ಸೆಲ್ ತೆರೆಯಲಾಗಿದೆ. ಈ ಕಾರ್ಯವನ್ನು ನಿರ್ವಹಿಸಲು ಒಬ್ಬ ನುರಿತ ಪ್ಲೇಸ್‌ಮೆಂಟ್ ಅಧಿಕಾರಿಯಿರುತ್ತಾರೆ.

ಜೂನ್ 2006 ರಿಂದ ವಿದ್ಯಾರ್ಥಿಗಳ ಉಪಯೋಗಕ್ಕೆಂದು ಆಪ್ತ ಸಲಹಾ/ಸಮಾಲೋಚನಾ ಕೋಶವನ್ನು (ಕೌನ್ಸಿಲಿಂಗ್ ಸೆಲ್) ಪ್ರಾರಂಭಿಸಲಾಗಿದ್ದು ಇದು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವತ್ತ ಗಮನ ಕೊಡುತ್ತದೆ.

**❖ ರೆಡ್‌ಕ್ರಾಸ್ ಯುತ್‌ವಿಂಗ್, ರೆಡ್ ರಿಬ್ಬನ್ ಕ್ಲಬ್ ಹಾಗೂ ಇಕೋ ಕ್ಲಬ್ :**

ಕಾಲೇಜಿನಲ್ಲಿ ಅಂತರ್ ರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದಲ್ಲಿ ಕರ್ನಾಟಕ ಸರ್ಕಾರದ ಆದೇಶದಂತೆ ಹಾಗೂ ವಿಶ್ವವಿದ್ಯಾಲಯದ ಅನುಮತಿ ಮೇರೆಗೆ ಈ ಮೇಲಿನ ಸಂಘಗಳನ್ನು ಪ್ರಾರಂಭಿಸಲಾಗಿವೆ. ವರ್ಷದುದ್ದಕ್ಕೂ ಈ ಸಂಘಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.

**❖ ವಿದ್ಯಾರ್ಥಿ ಕಲ್ಯಾಣ ವಿಭಾಗ ಮತ್ತು ವಿದ್ಯಾರ್ಥಿಗಳ ತೊಂದರೆ ನಿವಾರಣ ಘಟಕ :**

ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ತೊಂದರೆಗಳನ್ನು ಬಗೆಹರಿಸುವುದಕ್ಕಾಗಿ 'ವಿದ್ಯಾರ್ಥಿಗಳ ತೊಂದರೆ ನಿವಾರಣ ಘಟಕ'ವನ್ನು ಸ್ಥಾಪಿಸಲಾಗಿದೆ. ಒಬ್ಬ ಹಿರಿಯ ಪ್ರಾಧ್ಯಾಪಕರು ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಾರೆ. "ಕರಿಯರ್ ಮತ್ತು ಕೌನ್ಸಿಲಿಂಗ್ ಸೆಲ್" ಯು.ಜಿ.ಸಿ. ಅನುದಾನದಿಂದ ಸ್ಥಾಪಿಸಲಾಗಿದೆ. ಇದರ ಕೋ–ಆರ್ಡಿನೇಟರ್ ನುರಿತ ತರಬೇತಿದಾರರಿಂದ ವಿದ್ಯಾರ್ಥಿಗಳಿಗೆ ಟ್ರೇನಿಂಗ್ ಕೊಡಿಸುವ ಕಾರ್ಯ ನಿರ್ವಹಿಸುತ್ತಾರೆ.

**❖ ಆರೋಗ್ಯ ಕೇಂದ್ರ**

ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಯ ಅನುಕೂಲಕ್ಕಾಗಿ ಕಾಲೇಜಿನ ಆವರಣದಲ್ಲಿ ಒಂದು ಸ್ವಯಂ ಪರಿಪೂರ್ಣವಾದ ಮತ್ತು ಪೂರ್ಣಾವಧಿ ಕೆಲಸ ನಿರ್ವಹಿಸುವ ಆರೋಗ್ಯ ಕೇಂದ್ರವಿದೆ. ಇದು ಮೆಡಿಕಲ್ ಆಫೀಸರ್, ಫಾರ್ಮಸಿಸ್ಟ್, ಸ್ಟಾಫ್ ನರ್ಸ ಮತ್ತು ಇಬ್ಬರು ಸಿಪಾಯಿಗಳನ್ನು ಹೊಂದಿದೆ. ಇಲ್ಲಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯನ್ನು ಮಾಡುವುದಲ್ಲದೆ ಔಷಧಿಗಳನ್ನು ಉಚಿತವಾಗಿ ಕೊಡಲಾಗುತ್ತದೆ. ಆರೋಗ್ಯ ಕೇಂದ್ರ ಕಂಪ್ಯೂಟರಗಳಲ್ಲದೇ ಈ.ಸಿ.ಜಿ.ಮಶೀನ್, ಇಲೆಕ್ಟ್ರಾನಿಕ್ ಬ್ಲಡ್ ಶುಗರ್ ಎಸ್ಟಿಮೇಶನ್ ಮತ್ತು ಯುರಿನ್ ಎನಲೈಜರ್ ಮುಂತಾದ ಸೌಲಭ್ಯಗಳಿಂದ ಸುಸಜ್ಜಿತವಾಗಿದೆ. ಈ ಆರೋಗ್ಯ ಕೇಂದ್ರವು ಬೆಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ಹಾಗೂ ಸಾಯಂಕಾಲ 4 ರಿಂದ 6 ರ ವರೆಗೆ ಕಾರ್ಯನಿರ್ವಹಿಸುತ್ತದೆ.

**❖ ಬ್ಯಾಂಕ್ :**

ಕಾಲೇಜಿನ ಆವರಣದಲ್ಲಿ ಸಿಂಡಿಕೇಟ್ ಬ್ಯಾಂಕ ಶಾಖೆ ಇದ್ದು ಇದು ವಾರದ ದಿನಗಳಲ್ಲಿ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2.30 ರವರೆಗೆ, ಮಧ್ಯಾಹ್ನ 3–00 ರಿಂದ 4.00 ರವರೆಗೆ ಹಾಗೂ ಶನಿವಾರ 12.30 ರ ವರೆಗೆ ಕಾರ್ಯ ನಿರ್ವಹಿಸುತ್ತದೆ.

**❖ ಕ್ಯಾಂಟೀನ್ (ಉಪಹಾರಗೃಹ) :**

ಕಾಲೇಜಿನ ಆವರಣದಲ್ಲಿ ಕ್ಯಾಂಟೀನ್ ಇದ್ದು ಇದು ಮುಂಜಾನೆಯಿಂದ ಸಂಜೆಯವರೆಗೆ ಕಾರ್ಯನಿರತವಾಗಿರುತ್ತದೆ.

**❖ ಮಹಿಳಾ ಸಂಘ :**

ಮಹಾವಿದ್ಯಾಲಯದ ವಿದ್ಯಾರ್ಥಿನಿಯರ ಪಠ್ಯೇತರ ಚಟುವಟಿಕೆಗಳಿಗಾಗಿ ಮತ್ತು ಅವರಲ್ಲಿರುವ ಸುಪ್ತಪ್ರತಿಭೆ ವ್ಯಕ್ತಪಡಿಸಲು 'ಮಹಿಳಾ ಸಂಘ' ಎಂಬ ವೇದಿಕೆಯು ಕಾರ್ಯನಿರ್ವಹಿಸುತ್ತದೆ. ಇದಕ್ಕೆ ಒಬ್ಬ ಹಿರಿಯ ಅನುಭವಿ ಮಹಿಳಾ ಪ್ರಾಧ್ಯಾಪಕರು ಕಾರ್ಯಾಧ್ಯಕ್ಷರಾಗಿರುತ್ತಾರೆ.

**❖ ಸಮಿತಿಗಳು:**

ನಮ್ಮ ಕಾಲೇಜಿನಲ್ಲಿ ವಿವಿಧ ವರ್ಗಗಳ ಪ್ರವೇಶ ಸಮಿತಿಗಳು ಮತ್ತು ಪರೀಕ್ಷಾ ಸಮಿತಿಗಳಲ್ಲದೆ ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿಯವರು ಸದಸ್ಯರಾಗಿರುವ ಕೆಳಕಾಣಿಸಿದ ಸಮಿತಿಗಳು ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುತ್ತವೆ.

- ಕಾಲೇಜಿನ ಆವರಣದ ಸುರಕ್ಷಾ ಸಮಿತಿ
- ಕಾಲೇಜು ಅಭಿವೃದ್ಧಿ ಸಮಿತಿ
- ಹಾಜರಾತಿ ಸಮಿತಿ
- ವೇಳಾಪತ್ರಿಕೆ ಸಮಿತಿ
- ಕ್ಯಾಂಟೀನ ಸಮಿತಿ
- ಗ್ರಂಥಾಲಯ ಸಮಿತಿ
- ವಿದ್ಯಾರ್ಥಿ ಮಾರ್ಗದರ್ಶನ ಸಮಿತಿ
- ಶಿಸ್ತುಪಾಲನಾ ಸಮಿತಿ

- ಹಾಸ್ಟೇಲ್ ಶಿಸ್ತುಪಾಲನಾ ಸಮಿತಿ
- ವಿದ್ಯಾರ್ಥಿ ಕಲ್ಯಾಣಸಮಿತಿ
- ಶಿಷ್ಯವೇತನ ಸಮಿತಿ
- ಮಹಿಳಾ ದೌರ್ಜನ್ಯ ನಿವಾರಣಾ ಘಟಕ

❖ **ಅಭ್ಯಾಸ ವರ್ತುಲಗಳು :**

ವಿದ್ಯಾರ್ಥಿಗಳಿಗೆ ಅವರವರ ವಿಷಯದಲ್ಲಿ ಹೆಚ್ಚಿನ ಮಾಹಿತಿ ಪಡೆಯಲು ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಅನುಕೂಲವಾಗುವಂತೆ ಪ್ರತಿಯೊಂದು ವಿಭಾಗದಲ್ಲಿ ಪ್ರತ್ಯೇಕ ಅಭ್ಯಾಸ ವರ್ತುಲಗಳಿವೆ. ಆಯಾ ವಿಭಾಗದ ಕಾರ್ಯಾಧ್ಯಕ್ಷರ ಮಾರ್ಗದರ್ಶನ ಪಡೆದು ವಿದ್ಯಾರ್ಥಿಗಳು ವರ್ಷವಿಡೀ ಉಪಯುಕ್ತ ಕಾರ್ಯಕ್ರಮಗಳನ್ನು ನಡೆಸಲು ಕೆಳಕಾಣಿಸಿದ ಅಭ್ಯಾಸ ವರ್ತುಲಗಳು ನೆರವಾಗುತ್ತವೆ

1. ಕರ್ನಾಟಕ ಸಂಘ
2. ಇಂಗ್ಲೀಷ ಸ್ಟಡಿ ಸರ್ಕಲ್
3. ಹಿಂದಿ ಸಭಾ
4. ಸಂಸ್ಕೃತ, ಪ್ರಾಕೃತ, ಯೋಗ ಸಂಘ
5. ಭಾಷಾವಿಜ್ಞಾನ ಸಂಘ
6. ಫಾರೆನ್ ಲ್ಯಾಂಗ್ವೆಜ್ ಅಸೋಸಿಯೇಶನ್
7. ಮರಾಠಿ ಮಂಡಳ
8. ಉರ್ದು ಪರ್ಶಿಯನ್ ಸಂಘ –ಬಜಮೆ ಅದಾಬ
9. ರಾಜ್ಯಶಾಸ್ತ್ರ ಸಂಘ
10. ಅರ್ಥಶಾಸ್ತ್ರ ಸಂಘ
11. ಸಮಾಜಶಾಸ್ತ್ರ ಸಂಘ
12. ಮಾನವಶಾಸ್ತ್ರ ಸಂಘ
13. ತತ್ವಶಾಸ್ತ್ರ ಸಂಘ
14. ಸಂಖ್ಯಾಶಾಸ್ತ್ರ ಸಂಘ
15. ಗಣಿತಶಾಸ್ತ್ರ ಸಂಘ
16. ಮನಃಶಾಸ್ತ್ರ ಸಂಘ
17. ಇತಿಹಾಸ ಸಂಘ
18. ವಾಣಿಜ್ಯಶಾಸ್ತ್ರ ಸಂಘ
19. ಕಂಪ್ಯೂಟರ್ ಅಪ್ಲೀಕೇಶನ್ಸ್ ಅಸೋಸಿಯೇಶನ್
20. ಪತ್ರಿಕೋದ್ಯಮ ಸಂಘ
21. ಸಮಾಜಕಾರ್ಯ ಸಂಘ

ಇವುಗಳ ಜೊತೆಗೆ ಕಾಲೇಜು 'ಕ್ರಿಯೇಟಿವ್ ರಿಸ್ಪಾನ್ಸ್ : ಸ್ಟುಡೆಂಟ್ಸ್ ಫೋರಂ' ಎಂಬ ವೇದಿಕೆಯನ್ನು ಹೊಂದಿದೆ. ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಇದು ಪ್ರಮುಖ ಪಾತ್ರವನ್ನು ವಹಿಸುತ್ತದೆ. "ಭಾವ ಸಂಗಮ ಸಾಹಿತ್ಯ ವೇದಿಕೆ" ಯುವ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡುತ್ತಿದೆ. ಇಲ್ಲಿಯವರೆಗೆ ವಿದ್ಯಾರ್ಥಿಗಳ ಅನೇಕ ಕವನ, ಕಥೆ ಮತ್ತು ಕಾದಂಬರಿಗಳನ್ನು ಬಿಡುಗಡೆಗೊಳಿಸಲಾಗಿದೆ. ದಿವ್ಯಾಂಗ ಚೇತನ ವಿದ್ಯಾರ್ಥಿಗಳಿಗೆ ನೆರವಾಗಲೆಂದು ಆಸರ ಎಂಬ ವೇದಿಕೆಯನ್ನು ಸ್ಥಾಪಿಸಲಾಗಿದ್ದು ಅನುಭವಿ ಪ್ರಾಧ್ಯಾಪಕರು ಅದರ ಕೋಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಕಾಲೇಜಿನ ಆರೋಗ್ಯಕರ ಆಚರಣೆಗಳು

ಕರ್ನಾಟಕ ಕಲಾ ಮಹಾವಿದ್ಯಾಲಯವು ಹಲವಾರು ರಚನಾತ್ಮಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುವ ಆಚರಣೆಗಳನ್ನು ಅನುಸರಿಸುತ್ತ ಬಂದಿದೆ. ಇವು ವಿದ್ಯಾರ್ಥಿಗಳ ಸರ್ವತೋಮುಖ ಕಲ್ಯಾಣವನ್ನು ಸಾಧಿಸಲು ಪೂರಕವಾಗಿರುತ್ತವೆ.

1. ಕಾಲೇಜಿನಲ್ಲಿ ಕಲಿತುಹೋದ ಪ್ರತಿಷ್ಠಿತ ಹಳೆಯ ವಿದ್ಯಾರ್ಥಿಗಳನ್ನು ವಿವಿಧ ಕಾರ್ಯಕ್ರಮಗಳಿಗೆ ಅತಿಥಿಗಳನ್ನಾಗಿ ಆಮಂತ್ರಿಸಿ ಈಗಿನ ವಿದ್ಯಾರ್ಥಿಗಳು ಸ್ಫೂರ್ತಿ ಪಡೆಯುವ ಅವಕಾಶ ಕಲ್ಪಿಸುವುದು.
2. ಖ್ಯಾತ ಕಲಾವಿದರು. ಸಾಹಿತಿಗಳು, ಶಿಕ್ಷಣತಜ್ಞರು, ಉದ್ಯಮಿಗಳು, ಕ್ರೀಡಾಪಟುಗಳು ಮುಂತಾದವರನ್ನು ಕಾಲಕಾಲಕ್ಕೆ ಆಮಂತ್ರಿಸಿ ಸತ್ಕರಿಸಿ ವಿದ್ಯಾರ್ಥಿಗಳಿಗೆ ಅವರ ಸಾಧನೆಗಳ ಪರಿಚಯ ಮಾಡಿಕೊಡುವುದು.

3. ವಿಶೇಷ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಹಾಗೂ ಗ್ರಂಥಾಲಯ ಮುಂತಾದ ಸೌಲಭ್ಯ ನೀಡುವುದು.

4. ಕ್ರೀಡೆಗಳಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಸಾಧನೆ ಮಾಡುವ ವಿದ್ಯಾರ್ಥಿಗಳಿಗೆ ಪೌಷ್ಠಿಕ ಆಹಾರ, ವಿಶೇಷ ಪುರಸ್ಕಾರ ಮತ್ತು ಹೆಚ್ಚಿನ ತರಬೇತಿ ನೀಡುವುದು.

5. ಗ್ರಾಮೀಣ ಪ್ರದೇಶಗಳಿಂದ ಬಂದ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.

6. ಶಿಸ್ತು ಪಾಲನಾ ಸಮಿತಿಯು ಕಾಲೇಜಿನ ಆವರಣದಲ್ಲಿ ಸಂಚರಿಸುತ್ತಾ ಶಾಂತಿ ಮತ್ತು ಶಿಸ್ತನ್ನು ಕಾಪಾಡುವಲ್ಲಿ ಸಹಕರಿಸುತ್ತದೆ. ಹೀಗೆ ಕ್ಯಾಂಪಸ್ಸಿನಲ್ಲಿ ಸ್ವಚ್ಛ, ಆರೋಗ್ಯಕರ, ಶಿಸ್ತಿನ ಹಾಗೂ ಸ್ನೇಹಮಯ ವಾತಾವರಣವಿರುವಂತೆ ನೋಡಿಕೊಳ್ಳಲಾಗುವುದು.

## ವಿದ್ಯಾರ್ಥಿಗಳು ಕಡ್ಡಾಯವಾಗಿ ಪಾಲಿಸಲೇಬೇಕಾದ ನಿಯಮಗಳು

1. ವಿದ್ಯಾರ್ಥಿಗಳು ಪ್ರತಿಯೊಂದು ತರಗತಿಗೆ ನಿಯಮಿತವಾಗಿ ಹಾಜರಾಗಬೇಕು. ಹಾಜರಾತಿ ಕಡ್ಡಾಯವಾಗಿದ್ದು, ಶೇಕಡಾ 75 ಕ್ಕಿಂತ ಹಾಜರಾತಿ ಕಡಿಮೆ ಇದ್ದವರಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿ ನೀಡಲಾಗುವುದಿಲ್ಲ.

2. ತರಗತಿಗಳು ನಡೆದಾಗ ಕಾಲೇಜಿನ ಕಾರಿಡಾರಿನಲ್ಲಿ ತಿರುಗಾಡುವುದನ್ನು ನಿರ್ಬಂಧಿಸಲಾಗಿದೆ.

3. ಬಿಡುವಿನ ವೇಳೆಯಲ್ಲಿ ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿ ಮತ್ತು ವಿದ್ಯಾರ್ಥಿ ಧಾಮದಲ್ಲಿ ಶಾಂತ ರೀತಿಯಲ್ಲಿ ಓದುತ್ತಾ ಕಾಲ ಕಳೆಯಬೇಕು.

4. ಕಾಲೇಜಿನ ಆವರಣದಲ್ಲಿರುವಾಗ ವಿದ್ಯಾರ್ಥಿಗಳು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹೊಂದಿರಬೇಕು.

5. ಯಾವುದೇ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮ, ಕ್ರೀಡೆಗಳು ಮುಂತಾದ ಚಟುವಟಿಕೆಗಳನ್ನು ನಡೆಸಲು ಪ್ರಾಚಾರ್ಯರಿಂದ ಪೂರ್ವಾನುಮತಿ ಪಡೆಯಬೇಕಾಗುತ್ತದೆ.

6. ಪದವಿಪೂರ್ವ ಮತ್ತು ಪದವಿ ತರಗತಿಗಳ ಎಲ್ಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯವಾಗಿರುತ್ತದೆ.

7. ಯಾವುದೇ ರೀತಿಯ ಮುಷ್ಕರ ಮಂತಾದವುಗಳ ನೆಪದಿಂದ ಕಾಲೇಜಿನ ದಿನನಿತ್ಯದ ಕೆಲಸಕ್ಕೆ ವ್ಯತ್ಯಯನ್ನುಂಟು ಮಾಡಿದರೆ ಮತ್ತು ಕಾಲೇಜಿನ ಘನತೆ-ಗೌರವಗಳಿಗೆ ಧಕ್ಕೆಯಾಗುವಂತ ನಡೆದುಕೊಂಡರೆ ಅಂಥವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು.

8. ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳಿಗೆ ಯಾವುದೇ ರೀತಿಯಿಂದ ತೊಂದರೆ ಮಾಡುವಂತಿಲ್ಲ. ವಿದ್ಯಾರ್ಥಿನಿಯರನ್ನು ಚುಡಾಯಿಸುವುದು ಮತ್ತು ರ್‍ಯಾಗಿಂಗ್ ಮಾಡುವ ವಿದ್ಯಾರ್ಥಿಗಳನ್ನು ಅವರ ಪಾಲಕರು ಮತ್ತು ಕಾಲೇಜಿನ ಶಿಸ್ತುಪಾಲನಾ ಸಮಿತಿಯ ಸಮ್ಮುಖದಲ್ಲಿ ವಿಚಾರಣೆಗೆ ಒಳಪಡಿಸಿ, ಅವರ ಪ್ರವೇಶವನ್ನು ರದ್ದುಪಡಿಸಲಾಗುತ್ತದೆ.

9. ಸರಕಾರಿ ಆದೇಶದನ್ವಯ ವಿದ್ಯಾರ್ಥಿಗಳಿಗೆ ಕಾಲೇಜು ಆವರಣದಲ್ಲಿ ಮತ್ತು ವರ್ಗಗಳಲ್ಲಿ ಮೊಬೈಲ್ ಫೋನ್ ಬಳಕೆಯನ್ನು ನಿಷೇಧಿಸಲಾಗಿದೆ. ಒಂದು ವೇಳೆ ವಿದ್ಯಾರ್ಥಿಗಳ ಬಳಿ ಮೊಬೈಲ್ ಫೋನ್ ಬಳಕೆ ಕಂಡು ಬಂದಲ್ಲಿ ಅಂಥ ವಿದ್ಯಾರ್ಥಿಗಳಿಂದ ಮೊಬೈಲ್‌ಫೋನ್ ವಶಪಡಿಸಿಕೊಂಡು ಪಾಲಕರನ್ನು ಕರೆಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ. ಮೇಲ್ಕಾಣಿಸಿದ ಮತ್ತು ಕಾಲಕಾಲಕ್ಕೆ ಜಾರಿಗೆ ತರುವ ಇತರ ಯಾವುದೇ ನಿಯಮಗಳನ್ನು ಉಲ್ಲಂಘಿಸುವ ವಿದ್ಯಾರ್ಥಿಗಳನ್ನು ವಿಚಾರಣೆಗೆ ಒಳಪಡಿಸಿ ಕಾಲೇಜಿನಿಂದ ಹೊರಹಾಕುವ ಅಧಿಕಾರವನ್ನು ಶಿಸ್ತುಪಾಲನಾ ಸಮಿತಿ ಹೊಂದಿರುತ್ತದೆ.

10. **ರಾಜ್ಯ ಸರ್ಕಾರದ ಆದೇಶಾನುಸಾರ ನಿತ್ಯ ಮುಂಜಾನೆ 10.50 ಗಂಟೆಗೆ ಮುಖ್ಯ ಕಟ್ಟಡದ ಮುಂಭಾಗದಲ್ಲಿ ರಾಷ್ಟ್ರಗೀತೆ ಹಾಡುವುದು ಕಡ್ಡಾಯವಾಗಿರುತ್ತದೆ.**

# ಕರ್ನಾಟಕ ಕಲಾ ಮಹಾವಿದ್ಯಾಲಯದ ಶಿಕ್ಷಕವೃಂದ

## ಪ್ರಾಚಾರ್ಯರು : ಡಾ. ಬಿ.ಎಫ್ ಚಾಕಲಬ್ಬಿ, M.SC, M.Phil.,Ph.D.

### ■ ಇಂಗ್ಲೀಷ ವಿಭಾಗ

೧. ಡಾ(ಶ್ರೀಮತಿ).ಎಸ್.ಎ.ಜಾಲಿಹಾಳ MA.,Ph.D

೨. ಪ್ರೊ. (ಶ್ರೀಮತಿ) ಕೆ.ಎ. ಗಾಂವಕರ, MA. M.PHIL

೩. ಡಾ.ಎಂ.ಕೆ.ವ್ಹಿ ಲಮಾಣಿ MA, RBP, Ph.D.HOD

೪. ಡಾ. ಪಿ.ಎಸ್.ಸುಬ್ರಮಣ್ಯ ಭಟ್ಟ MA, Ph.D, PGDTE

೫. ಪ್ರೊ. ಜೋನ್‌ಲೀಲಾ ಮಾಡ್ತಾ, MA M.PHIL

೬. ಡಾ.(ಶ್ರೀಮತಿ)ವಿಭಾವರಿ ಕುಲಕರ್ಣಿ,MA.,Ph.D.

೭. ಡಾ.(ಶ್ರೀಮತಿ)ಸ್ಟೆಲ್ಲಾ ಸ್ಟಿವನ್MA Ph.D. .

೮. ಪ್ರೊ. ಸಿ.ಬಿ.ಐನಳ್ಳಿ MA

೯. ಪ್ರೊ. ವಿರೇಂದ್ರ ಯಾದವ್.ಬಿ.ಎಮ್. MA

### ■ ಕನ್ನಡ ವಿಭಾಗ

೧. ಡಾ.ಡಿ.ಬಿ.ಕರಡೋಣಿ, MA., M.Phil, Ph.D. HOD

೨. ಡಾ.(ಶ್ರೀಮತಿ)ಎಂ.ಆರ್.ಹಿರೇಮಠ MA.,Ph.D,

೩. ಡಾ.ಬಿ.ಎಸ್. ಭಜಂತ್ರಿ, MA.,M.Phil, Ph.D., Dip GS

೪. ಡಾ.ವ್ಹಿ.ಎಚ್. ತಳವಾರ, MA., Ph.D.,

### ■ ಹಿಂದಿ ವಿಭಾಗ

೧. ಡಾ. ಝುಡ್ ಎ. ಗುಳಗುಂಡಿ, MA.,Ph.D.HOD

### ■ ಸಂಸ್ಕೃತ ವಿಭಾಗ

೧. ಡಾ(ಶ್ರೀಮತಿ) ರಜನಿ ಎಚ್., MA.,Ph.D. HOD

### ■ ಮರಾಠಿ ವಿಭಾಗ

೧. ಡಾ. ಎ.ಆರ್. ಯಾರ್ದಿ, MA.,Ph.D.HOD

೨. ಡಾ. ವಾಯ್.ಎಸ್. ರಾವುತ MA.,Ph.D.PGDC

### ■ ಉರ್ದು ಮತ್ತು ಪರ್ಶಿಯನ್ ವಿಭಾಗ

೧. ಡಾ.(ಶ್ರೀಮತಿ)ಎಸ್.ಎ.ಕೋಳೂರ MA.,Ph.D HOD.

೨. ಡಾ.(ಶ್ರೀಮತಿ)ಸಯ್ಯದ ಯಾಸ್ಮಿನ್ ಫಾತಿಮಾMA.,Ph.D

### ■ ವಿದೇಶಿ ಭಾಷಾ ವಿಭಾಗ

೧. ಡಾ. (ಶ್ರೀಮತಿ)ಪಿ.ಎಸ್.ಹಳ್ಳಿಕೇರಿ,MA.,MBA.,Ph.D.HOD,

### ■ ಇತಿಹಾಸ ವಿಭಾಗ

೧. ಡಾ.ಕೆ.ಜಗದೀಶ,MA,M.Phil, Ph.D,Dip in Epigraphy, HOD

### ■ ಅರ್ಥಶಾಸ್ತ್ರ ವಿಭಾಗ

೧. ಡಾ. (ಶ್ರೀಮತಿ) ವ್ಹಿ. ಶಾರದಾ, MA.,Ph.D. HOD

೨. ಡಾ. ಹೊನ್ನಪ್ಪ,, MA., M.Phil, Ph.D.

೩. ಡಾ (ಶ್ರೀಮತಿ) ಅನ್ನಪೂರ್ಣಾ ಶಿವಣ್ಣ, MA.,Ph.D.

### ■ ರಾಜ್ಯಶಾಸ್ತ್ರ ವಿಭಾಗ

೧. ಡಾ.ಎಸ್.ಎನ್.ಹುಲ್ಲಣ್ಣವರ,MA.,Ph.D.LLB,

೨. ಡಾ. ಮಹದೇವಪ್ಪ ದಳಪತಿ, MA.,Ph.D. HOD

### ■ ಸಮಾಜಶಾಸ್ತ್ರ ವಿಭಾಗ

೧. ಡಾ.(ಶ್ರೀಮತಿ)ಎಂ.ಸಿ ಚಲವಾದಿ, MA.,Ph.D. HOD

೨. ಡಾ. ಆಯ್. ಸಿ. ಮುಳಗುಂದ, MA.,Ph.D.

### ■ ಮಾನವಶಾಸ್ತ್ರ ವಿಭಾಗ.

೧. ಡಾ. (ಶ್ರೀಮತಿ) ಎ.ಎಸ್.ಹಳ್ಳಿಕೇರಿ, MA.,Ph.D.HOD

೨. ಡಾ.ವ್ಹಿ.ಜಗದೀಶ, MA.,Ph.D..PGDC

### ■ ಮನೋವಿಜ್ಞಾನ ವಿಭಾಗ

೧. ಡಾ.(ಶ್ರೀಮತಿ)ಆರ್.ಎನ್.ಕೆಂಚಪ್ಪನವರMA.,Ph.D.HOD

೨. ಡಾ. ಎಸ್. ಜಿ. ಜಾಧವ, MA.,M.Phil.,Ph.D.

### ■ ತತ್ವಶಾಸ್ತ್ರ ವಿಭಾಗ

೧. ಡಾ.ಎ.ಸಿ ಕುರಹಟ್ಟಿ MA.,Ph.D.

೨. ಡಾ. ಬಿ. ಮಹಾದೇವಯ್ಯ, MA.,Ph.D, HOD

### ■ ಸಂಖ್ಯಾಶಾಸ್ತ್ರ ವಿಭಾಗ

೧. ಡಾ. ಬಿ. ಎಫ್. ಚಾಕಲಬ್ಬಿ, M.Sc.,M.Phil., Ph.D,ಪ್ರಾಂಶುಪಾಲರು

೨. ಪ್ರೊ. ಎ. ಎಸ್. ಐನಾಪೂರ,M.Sc., HOD

೩. ಡಾ. ಎಸ್.ಆರ್.ಗಣಿ M.Sc.,Ph.D, P.G.D.C
೪. ಡಾ. ಎಂ.ಎನ್.ಮೆಗೇರಿ M.Sc.,Ph.D,P.G.D.C
೫. ಡಾ. (ಶ್ರೀಮತಿ)ಕೆ.ಎಮ್. ಅಷ್ಟಗಿಮಠ M.Sc.,Ph.D

■ **ಗಣಿತಶಾಸ್ತ್ರ ವಿಭಾಗ**

೧. ಡಾ. ಜೆ.ಬಿ. ತೋರಣಗಟ್ಟಿ M.Sc.,M.Phil.Ph.D. HOD
೨. ಡಾ.(ಶ್ರೀಮತಿ)ಕೆ.ಜಿ.ಮಿರಜಕರ್ M.Sc.,Ph.D
೩. ಪ್ರೊ. ಬಿ. ಪರ್ವತಾಲು M.Tech.

■ **ಕಂಪ್ಯೂಟರ್ ಅಪ್ಲಿಕೇಶನ್ ವಿಭಾಗ**

೧. ಡಾ. ಎಂ.ಎನ್.ಮೆಗೇರಿ.,M.Sc.,Ph.D. PGDC, Coordinator

■ **ವಾಣಿಜ್ಯಶಾಸ್ತ್ರ ವಿಭಾಗ**

೧. ಪ್ರೊ. ವ್ಹಿ.ಎಸ್.ತಳವಾರ M.Com, M.Phil, MBA HOD

■ **ವ್ಯವಹಾರ ಅಧ್ಯಯನ ವಿಭಾಗ**

೧. ಡಾ. ಬಿ.ಬಿ ಬಿರಾದಾರ MA., MBA, M.Phil , Ph.D
೨. ಡಾ. ಕಿರಣಕುಮಾರ, MBA,PGDMP, M & IR-Coordinator

■ **ಭೂಗೋಳಶಾಸ್ತ್ರ ವಿಭಾಗ**

೧. ಡಾ. ಎಲ್.ಟಿ.ನಾಯಕ,MA.,M.Phil.,Ph.D.HOD.

೨. ಡಾ.ಎಸ್.ಎಸ್. ಮೋಟೆಬೆನ್ನೂರ MA.,Ph.D..
೩. ಡಾ. (ಶ್ರೀಮತಿ) ವ್ಹಿ.ಬಿ ಸಾವಿರಮಠ MA.,Ph.D.
೪. ಡಾ.ಜಿ.ಎನ್. ಕುಮ್ಮೂರ MA.,M.Phil.Ph.D

■ **ಅಪರಾಧಶಾಸ್ತ್ರ ಮತ್ತು ವಿಧಿವಿಜ್ಞಾನ ವಿಭಾಗ**

೧. ಡಾ. ಸಿ.ಎಫ್. ಮೂಲಿಮನಿ MA.,Ph.D.
(ಪ್ರಾಚಾರ್ಯರು, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ)
೩. ಡಾ. ಜೆ.ಎಲ್.ಕಲ್ಯಾಣ M.Sc.,Ph.D HOD

■ **ಸಮೂಹ ಸಂವಹನ &ಪತ್ರಿಕೋದ್ಯಮ**
(ಪ್ರಾಚಾರ್ಯರು)

■ **ಸಮಾಜಕಾರ್ಯ-BSW**
( ಪ್ರಾಚಾರ್ಯರು)

■ **ಬಿ.ಟಿ.ಎ ವಿಭಾಗ, ಸಂಯೋಜಕರು**

ಡಾ. ಜಗದೀಶ ಕಿವುಡನ್ನವರ MA,M.Phil, Ph.D,Dip in Epigraphy,

■ **ಸ್ನಾತಕೋತ್ತರ ಅಧ್ಯಯನ, ಸಂಯೋಜಕರು**

ಡಾ. ಎನ್. ಎಚ್.ಕಲ್ಲೂರ., M.A Ph.D

**ಆವಶ್ಯಕವಿದ್ದಲ್ಲಿ ಸಂಪರ್ಕಿಸಬಹುದಾದ ಅಧಿಕಾರಿಗಳು ದೂರವಾಣಿ ಸಂಖ್ಯೆಗಳು**

| | | |
|---|---|---|
| 1. ಪ್ರಾಚಾರ್ಯರು | : | ಕಛೇರಿ : 0836 – 2215310 |
| 2. ಕಾಲೇಜಿನ ಕಛೇರಿ | : | 0836 – 2215310 ಫ್ಯಾಕ್ಸ್ : 0835–2215307 |
| 3. ಡಾ.ಎಸ್. ಎಲೇದಹಳ್ಳಿ (ಆರೋಗ್ಯಕೇಂದ್ರ) | : | 984533 6292 (ಗೃಹ) :0836–2770835 |
| 4. ಯುವ ರೆಡ್ ಕ್ರಾಸ್ ಪ್ರೋಗ್ರಾಂ ಆಫೀಸರ್ | : | ಡಾ. ವ್ಹಿ. ಹೆಚ್.ತಳವಾರ : 9740353609 & ಸ್ಟೆಲ್ಲಾ ಸ್ಟೀವನ್ಸ್ |
| 5. ಎಮ್.ಟಿ.ಎಮ್. ಸಂಯೋಜಕರು | : | ಡಾ. ಕೆ. ಜಗದೀಶ: 9844667429 (ಕಚೇರಿ) :0836–2215344 |
| 6. ಬಿ.ಬಿ.ಎ ಸಂಯೋಜಕರು | : | ಡಾ. ಕಿರಣಕುಮಾರ:9844094041(ಕಛೇರಿ) 0836–2215334 |
| 7. ಪಿ.ಜಿ ಸ್ನಾತಕೋತ್ತರ ಸಂಯೋಜಕರು | : | 087623 63807 |
| 8. ಕಾವೇರಿ ವಿದ್ಯಾರ್ಥಿನಿಲಯ | : | 0836–2215236 |
| ಉದಯ ವಿದ್ಯಾರ್ಥಿನಿಲಯ | : | 0836–2215240 |
| 9. ಎನ್.ಎಸ್.ಎಸ್ ಘಟಕಗಳು | : | ಡಾ.ಬಿ.ಎಸ್. ಭಜಂತ್ರಿ : 9448036196 |
| | | ಡಾ.(ಶ್ರೀಮತಿ) ಎಸ್.ಎ. ಕೋಳೂರ : 8147455635 |
| 10.ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳು | : | ಡಾ. ಮುಕುಂದ ಲಮಾಣಿ |

11. ಮಹಿಳಾ ಕಿರುಕುಳ ಪ್ರತಿಬಂಧಕ ಸೆಲ್ / ವಿದ್ಯಾರ್ಥಿಗಳ ತೊಂದರೆ ನಿವಾರಣಾ ಘಟಕ : 9449667637

| | | |
|---|---|---|
| 12. ಎನ್.ಸಿ.ಸಿ ಅಧಿಕಾರಿಗಳು | : | ಡಾ. ವಾಯ್.ಎಸ್. ರಾವುತ್: 7019609893/8792856691 |

(ಫೋನ್ ನಂ. ಬದಲಾವಣೆಯಾದ ಪಕ್ಷದಲ್ಲಿ ಕಾಲೇಜಿನ ಕಛೇರಿಗೆ ಫೋನ್ ಮಾಡಬಹುದು)

# ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ

**ಪ್ರಾಚಾರ್ಯರು : ಡಾ. ಬಿ.ಎಫ್, ಚಾಕಲಬ್ಬಿ,** M.Sc., Ph.D.

### ■ ಕಚೇರಿ ಸಿಬ್ಬಂದಿ

1. **ಶ್ರೀ ಎಸ್.ಎಚ್.ಮಡಿಗಾರ ಅಧೀಕ್ಷಕರು**
2. ಶ್ರೀ.ಕೆ.ಸಿ.ಮನಗುಂಡಿ, ಸಹಾಯಕ ಅಧೀಕ್ಷಕರು
3. ಶ್ರೀ.ಎಮ್.ಆರ್.ಚವ್ಹಾಣ ಸಹಾಯಕ ಅಧೀಕ್ಷಕರು
4. ಶ್ರೀ ಎಸ್.ಎಮ್. ತರಗಾರ, ಸಹಾಯಕ ಅಧೀಕ್ಷಕರು
5. ಶ್ರೀಮತಿ ಹಂಪಮ್ಮಾ ಮಾದರ, ಹಿರಿಯ ಸಹಾಯಕರು
6. ಶ್ರೀ ಕೆ.ಎಸ್. ಮಾಳಗಿ, ಕಿರಿಯ ಸಹಾಯಕರು
7. ಶ್ರೀ.ಎಂ.ಎಸ್.ಸಂಗಮ್ ಕಿರಿಯ ಸಹಾಯಕರು
8. ಶ್ರೀ ಎ.ಎಫ್. ಪಿಂಜಾರ್,ಕಿರಿಯ ಸಹಾಯಕರು, ಜಿಮಖಾನಾ
9. ಶ್ರೀ ಪಿ.ಎನ್. ಕೊಂಡಪಲ್ಲಿ, ಕಿರಿಯ ಸಹಾಯಕರು
10. ಶ್ರೀ. ಎಸ್. ಜಿ ಹಿರೇಮಠ, ಕಿರಿಯ ಸಹಾಯಕರು
11. ಶ್ರೀ ವ್ಹಿ.ಎಂ. ತಿಬೇಲಿ, ದಪ್ತರಿ

### ■ ಸಿಪಾಯಿ ಸಿಬ್ಬಂದಿ

1. ಶ್ರೀ.ಕೆ.ಕೆ.ಹರಿಜನ ಸಿಪಾಯಿ
2. ಶ್ರೀಮತಿ ರಾಮವ್ವ ಬಳ್ಳಾರಿ,ಸಿಪಾಯಿ, ಮನೋವಿಜ್ಞಾನ ವಿಭಾಗ
3. ಶ್ರೀ ಎ.ಬಿ.ಶಿವಾಳೆ, ಸಿಪಾಯಿ

### ■ ಗ್ರಂಥಾಲಯ ವಿಭಾಗ

**ಪ್ರಾಚಾರ್ಯರು**

1. **ಶ್ರೀ.ಶ್ರೀಧರ ಭಜಂತ್ರಿ, ಹಿರಿಯ ಸಹಾಯಕರು**
2. ಶ್ರೀಮತಿ.ಎಸ್.ಎಮ್.ಉಳ್ಳಿಕಾಶಿ
3. ಶ್ರೀಮತಿ ದ್ರಾಕ್ಷಾಯಣಿ. ಈ. ಪಟ್ಟಣಶೆಟ್ಟಿ, ಕಿರಿಯ.ಸಹಾಯಕರು
4. ಪ್ರವೀಣಚಂದ್ರ ಗಿರಿ, ಬೈಂಡರ್
5. ಶ್ರೀ.ಎನ್.ಎನ್.ಬಂಡಿ ಶಿಪಾಯಿ
6. ಶ್ರೀಮತಿ.ಭೀಮವ್ವ. ನರೇಂದ್ರ, ಶಿಪಾಯಿ

### ■ ವ್ಯವಹಾರ ಅಧ್ಯಯನ ವಿಭಾಗ (ಬಿ.ಬಿ.ಎ.)

1. ಶ್ರೀ ಎಂ.ಟಿ. ಸಾಂಬ್ರಾಣಿ, ಸಿಪಾಯಿ

### ■ ಆರೋಗ್ಯ ಕೇಂದ್ರ

1. **ಡಾ. ಎಸ್.ಎಲೇದಹಳ್ಳಿ, ಎಂ.ಬಿ.ಬಿ.ಎಸ್–ವೈದ್ಯರು**
2. ಶ್ರೀಮತಿ ಭೀಮಾ ಪೋಳ–ಸ್ಟಾಫ್ ನರ್ಸ್
4. ಶ್ರೀ ಆರ್.ಎಸ್. ಹೊಂಬಳ ಫಾರ್ಮಶಿಸ್ಟ್
5. ಶ್ರೀ ಪ್ರಭಾಕರ ಕೊಕಟಪಲ್ಲಿ, ಕಿರಿಯ ಸಹಾಯಕರು

*Education is the most powerful weapon which you can use to change the world*

***-Nelson Mandela***



# KARNATAK ARTS COLLEGE , DHARWAD
## Fees Structure for the year 2019 -20
## B.A-I/II SEMESTER

| | RED CHALLAN | | | |
|---|---|---|---|---|
| Sl.No. | Particulars of Fees | Fees per Sudent “GM IIA/IIB/IIIA/IIIB" | | "Fees per Student“ SC/ST/C-I" |
| I | K U General Fund Account | Without lab | With lab | |
| 1 | Tution Fees | 1108 | 1108 | |
| 2 | Library Fees | 92 | 92 | 92 |
| 3 | ABC Fees | 37 | 37 | 37 |
| 4 | Medical Fees | 226 | 226 | 226 |
| 5 | Admission fees (Fresh ) (B.A/B.Com - IIIrd /Vth Exemted) | 37 | 37 | 37 |
| 6 | Laboratory fees (For ractl sub only) | | 442 | |
| | **Total** | **1500** | **1942** | **392** |
| **II** | **COLLEGE P.D. ACCOUNT** | **WHITE CHALLAN** | | |
| 1 | Student Welfare Fund | 40 | 40 | |
| 2 | Teachers Benefits Fund | 31 | 31 | 31 |
| 3 | Sports Fees | 25 | 25 | 0 |
| 4 | College Development Fee | 97 | 97 | 61 |
| 5 | Union Fees (Gymakhana | 442 | 442 | 442 |
| 6 | Poor Student Aid Fund | 15 | 15 | 15 |
| 7 | ID Card Fees | 51 | 51 | 51 |
| 8 | KUSBS (SSIS) | 10 | 10 | 10 |
| 9 | Student Safety insurance fee | 19 | 19 | 17 |
| 10 | U.E.I.G.B. Fee | 30 | 30 | 30 |
| 11 | Study Circle Fees | 48 | 48 | 48 |
| 12 | Miscellaneous Fees | 48 | 48 | 48 |
| 13 | College Development Fund | 221 | 221 | 112 |
| 14 | CDC Fees | 10 | 10 | 10 |
| 15 | Youth Festival Fees | 10 | 10 | 10 |
| 16 | Extra Curricular Activities (NCC) Fees | 76 | 76 | 76 |
| 17 | Registration Fees(Fresh Candidates B.A./B.Com - IIIrd /Vth Exemted)" | 500 | 500 | 250 |
| 18 | Sports Development Fees | 25 | 25 | 25 |
| 19 | Flag Fee | 31 | 31 | 31 |
| 20 | Library Borwer Card Fees | 37 | 37 | 37 |
| 21 | "Caustion Money (fresh Candidates B.A./B.Com - IIIrd /Vth Exemted)" | 48 | 48 | 48 |
| 22 | Red Cross Fees | 76 | 76 | 76 |
| 23 | Carpuss Fund | 120 | 120 | 120 |
| 24 | N.S.S Fees | 5 | 5 | 5 |
| | **Total =** | **2015** | **2015** | **1553** |
| | **Grand Total** | **3515** | **3957** | **1945** |

**Note: Extra fees for optional subjects**

1) Public Administration = 1005
2) Functional English = 1005
3) Functional Hindi = 1005
4) Functional Kannada = 1005
5) Computer application = 2013
6) Mass Comm and Journalism =1830

# KARNATAK ARTS COLLEGE , DHARWAD

## Fees Structure for the year 2019 -20

## B.Com-I/II SEMESTER

| | RED CHALLAN | | |
|---|---|---|---|
| Sl.No. | Particulars of Fees | Fees per Sudent "GM IIA/IIB/IIIA/IIIB" | "Fees per Student" SC/ST/C-I" |
| I | **K U General Fund Account** | | |
| 1 | Tution Fees | 1108 | |
| 2 | Library Fees | 92 | 92 |
| 3 | ABC Fees | 37 | 37 |
| 4 | Medical Fees | 226 | 226 |
| 5 | Admission fees (Fresh ) | | |
| | (B.A/B.Com - IIIrd /Vth Exemted) | 37 | 37 |
| | Total | 1500 | 392 |
| II | **COLLEGE P.D. ACCOUNT** | **WHITE CHALLAN** | |
| 1 | Student Welfare Fund | 40 | |
| 2 | Teachers Benefits Fund | 31 | 31 |
| 3 | Sports Fees | 25 | 0 |
| 4 | College Development Fee | 97 | 61 |
| 5 | Union Fees (Gymakhana | 442 | 442 |
| 6 | Poor Student Aid Fund | 15 | 15 |
| 7 | ID Card Fees | 51 | 51 |
| 8 | KUSBS (SSIS) | 10 | 10 |
| 9 | Student Safety insurance fee | 19 | 19 |
| 10 | U.E.I.G.B. Fee | 30 | 30 |
| 11 | Study Circle Fees | 48 | 48 |
| 12 | Miscellaneous Fees | 48 | 48 |
| 13 | College Development Fund | 221 | 112 |
| 14 | CDC Fees | 10 | 10 |
| 15 | Youth Festival Fees | 10 | 10 |
| 16 | Extra Curricular Activities (NCC) Fees | 76 | 76 |
| 17 | Registration Fees (Fresh Candidates | | |
| | B.A./B.Com - IIIrd /Vth Exemted) | 500 | 250 |
| 18 | Sports Development Fees | 25 | 25 |
| 19 | Flag Fee | 31 | 31 |
| 20 | Library Borwer Card Fees | 37 | 37 |
| 21 | Caustion Money (fresh Candidates | | |
| | B.A./B.Com - IIIrd /Vth Exemted) | 48 | 48 |
| 22 | Computer Apllication fees | 2013 | 2013 |
| 23 | N.S.S Fees | 5 | 5 |
| 24 | Red Cross Fees | 76 | 76 |
| 25 | Carpuss Fund | 120 | 120 |
| | Total = | 4028 | 3568 |
| | **Grand Total** | **5528** | **3960** |